ಸಂಪುಟ: 01 ಸಂಚಿಕೆ: 100 ಪುಟ: 04 ಬೆಲೆ: 02 ಶನಿವಾರ ಸಪ್ಟೆಂಬರ್ 26 2026 ಮೊ: 7411699198/7406928404

# ಅಜಾತ ಶತ್ರು

ಜನರ ನುಡಿ.... ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ ಸತ್ಯದ ಧ್ವನಿ...

ಕನ್ನಡ ದಿನ ಪತ್ರಿಕೆ

ಪ್ರದೀಪಕುಮಾರ
ಸಂಪಾದಕರು




Volume:01 Issue: 100 Pages:04 Price:02 SATURDAY SEPTEMBER 26 2026 RNI NO: KNKAN/26/A4008 E-mail:ajathashathru2026@gmail.com

## ಸತ್ಯವಾಣಿ ಕಟೋಕ್ತಿ

ಮನಸ್ಸು ಛಿದ್ರಕ್ಕೊಳಪಡಿಸಿದ ವಸ್ತು ವ್ಯಕ್ತಿ ಕಡೆ ಮತ್ತೆ ಮತ್ತೆ ಒಳಗೊಳ್ಳುವಿಕೆ ಒಳಿತಲ್ಲ.

ವಾಣಿ ಭಂಡಾರಿ.

# ಅಣಿಅ ಜ್ಞಾನೇಶ್ ಕುಮಾರ್ ಬಂಧನಕ್ಕೆ ಆಗ್ರಹಿಸಿ ಬೆಂಗಳೂರಿನಲ್ಲಿ ನಾಳೆ ಕಾಂಗ್ರೆಸ್ ಬೃಹತ್ ಪ್ರತಿಭಟನೆ

**ಬೆಂಗಳೂರು: ಕೇಂದ್ರ ಚುನಾವಣಾ ಆಯೋಗದ ಮುಖ್ಯ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಬಂಧಿಸುವಂತೆ ಆಗ್ರಹಿಸಿ ಕಾಂಗ್ರೆಸ್ ವತಿಯಿಂದ ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗುತ್ತದೆ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಹೇಳಿದ್ದಾರೆ. ಸುದ್ದಿಗೋಷ್ಠಿಸಯಲ್ಲಿಂದು ಅವರು, ಈ ಹಿಂದೆ ರಾಹುಲ್ ಗಾಂಧಿ ಅವರು ಮಾಡಿದ್ದ ಎಲ್ಲಾ ಆರೋಪಗಳು ಸತ್ಯವಾಗುತ್ತಿವೆ. ಚುನಾವಣಾ ಆಯೋಗ, ಬಿಜೆಪಿಯ ಮೋರ್ಚಾದಂತೆ ಕೆಲಸ ಮಾಡುತ್ತಿದೆ ಎಂದು ಕಿಡಿಕಾರಿದರು.**

ಕಳೆದ 10 ತಿಂಗಳಲ್ಲಿ 14 ಬಾರಿ ಚುನಾವಣಾ ಆಯೋಗದ ಇತರ ಸದಸ್ಯರು ಮುಖ್ಯ ಆಯುಕ್ತರ ನಿರ್ಧಾರಗಳಿಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಆದರೆ ಬಿಜೆಪಿಯ ಜೊತೆ ಶಾಮಿಲಾದ ಆಯೋಗದ ಮುಖ್ಯ ಆಯುಕ್ತರು ದೇಶ ದ್ರೋಹದ ಕೆಲಸ ಮಾಡಿದ್ದಾರೆ ಎಂದು ಕಿಡಿಕಾರಿದರು. ಬಹುಮತ ಇದೆ ಎಂಬ ಕಾರಣಕ್ಕಾಗಿ ಕೇಂದ್ರ ಸರ್ಕಾರ 2023ರಲ್ಲಿ ಕಾನೂನು ತಿದ್ದುಪಡಿ ತಂದು ಚುನಾವಣಾ ಆಯುಕ್ತರನ್ನು ಬಂಧಿಸುವಂತಿಲ್ಲ ಎಂದು ನಿಯಮ ಮಾಡಿದೆ. 73 ವರ್ಷಗಳಿಂದ ಜಾರಿಯಲ್ಲಿದ್ದ ಕಾನೂನನ್ನು ಬದಲಾವಣೆ ಮಾಡಿರುವುದು ರಾಜಕೀಯ ಹುನ್ನಾರ.

ಚುನಾವಣಾ ಆಯುಕ್ತರ ನೇಮಕಾತಿ ಪ್ರಕ್ರಿಯೆಯಲ್ಲಿ ಸುಪ್ರೀಂಕೋರ್ಟಿನ ನ್ಯಾಯಮೂರ್ತಿಗಳನ್ನು ಹೊರಗಿಡಲಾಗಿದೆ. ಇದು ಕ್ರಿಕೆಟ್ ಆಟಗಾರನೊಬ್ಬ ಅಂಪೈರ್‌ನನ್ನು ಆಯ್ಕೆಮಾಡಿದಂತಾಗಿದೆ ಎಂದು ಲೇವಡಿ ಮಾಡಿದರು. ರಾಜ್ಯದಲ್ಲಿ 65 ಸಾವಿರ ಮತದಾರರನ್ನು ಪಟ್ಟಿಯಿಂದ ಅನಧಿಕೃತವಾಗಿ ಡಿಲಿಟ್ ಮಾಡಲಾಗಿದೆ. ಬಬುಲೇಶ್ವರ, ಹುಬ್ಬಳ್ಳಿ, ಧಾರವಾಡ ಸೇರಿದಂತೆ ಹಲವು ಕಡೆ ಮತದಾರರ ಸಹಿಗಳಿಲ್ಲದೇ ಹಾಗೂ ಸೂಕ್ತ ಕಾರಣಗಳಿಲ್ಲದೇ ಹೆಸರು ಡಿಲಿಟ್ ಆಗಿದೆ ಎಂದರು.ರಾಜ್ಯದಲ್ಲಿ ಎಸ್‌ಐಆರ್ ಆರಂಭವಾದಾಗ ಸುಮಾರು 35



ರಿಂದ 45 ಲಕ್ಷ ಮತದಾರರ ಸಂಖ್ಯೆಯಲ್ಲಿ ವ್ಯತ್ಯಾಸಗಳಾಗಬಹುದು ಎಂಬ ಅಂದಾಜಿತ್ತು. ಆದರೆ ನಿರೀಕ್ಷೆ ಮೀರಿ ಒಂದು ಕೋಟಿಗೂ ಹೆಚ್ಚಿನ ಮತದಾರರನ್ನು ಕೈಬಿಟ್ಟಿದ್ದಾರೆ. ಇದು ಪ್ರಶ್ನಾರ್ಹವಾಗಿದೆ ಎಂದರು.ಬಿಜೆಪಿ ನಾಯಕರ ಶಿಫಾರಸುಗಳನ್ನು ಆಧರಿಸಿ ತೆಗೆದುಕೊಂಡಿರುವ ಈ ಕ್ರಮ ಕಾನೂನು ಬಾಹಿರ. ಬೆಳಗಾವಿಯ ಶಾಸಕ ಅಭಯ್ ಪಾಟೀಲ್ ಅವರು ಚುನಾವಣಾ ಆಯೋಗಕ್ಕೆ ಪತ್ರ ಬರೆದು, 2 ಸಾವಿರ ಮತದಾರರನ್ನು ಪಟ್ಟಿಯಿಂದ ಕೈಬಿಡುವಂತೆ ಸಲಹೆ ನೀಡಿದ್ದಾರೆ. ಆಯೋಗ ಇದಕ್ಕೆ ಪ್ರತ್ಯುತ್ತರಿಸಿದೆ.

ಆದರೆ ಕೇಂದ್ರ ಚುನಾವಣಾ ಆಯೋಗದ ಮುಖ್ಯ ಆಯುಕ್ತರು ಬಿಜೆಪಿಯ ಅಣತಿಯಂತೆ ನಡೆದುಕೊಂಡಿದ್ದಾರೆ ಎಂದು ದೂರಿದರು. 2024ರಿಂದೀಚೆಗೆ ಮೂರು ಪ್ರಮುಖ ರಾಜ್ಯಗಳ ವಿಧಾನಸಭೆ ಚುನಾವಣೆ ನಡೆದಿದೆ. ಅಲ್ಲಿನ ಫಲಿತಾಂಶವು ಅನುಮಾನ ಮೂಡಿಸಿದೆ. ಈ ಅವಧಿಯಲ್ಲಿ 6 ರಾಜ್ಯಗಳ ಪೈಕಿ, ನಾಲ್ಕು ಕಡೆ ಚುನಾವಣಾ ಮುಖ್ಯಾಧಿಕಾರಿಯನ್ನು ಅಲ್ಲಿನ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯಾಗಿದ್ದವರನ್ನೇ ನೇಮಿಸಲಾಗಿದೆ ಎಂದು ವಿವರಿಸಿದರು. ಈ ಎಲ್ಲಾ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಚುನಾವಣಾ ಆಯೋಗದ ವಿರುದ್ಧ ಟೀಕೆಗಳು ಕೇಳಿ ಬಂದರೆ, ಬಿಜೆಪಿಯವರು ಉತ್ತರ ನೀಡುತ್ತಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಆಯೋಗದ ಮುಖ್ಯ ಆಯುಕ್ತ ಜ್ಞಾನೇಶ್ ಕುಮಾರ್ ವಿರುದ್ಧ ನಾಳೆ ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಯಲಿದೆ. ನಂತರ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಪ್ರತಿಭಟನೆಗಳು ಮುಂದುವರಿಯಲಿವೆ ಎಂದು ಅವರು ವಿವರಿಸಿದರು.

ನಾಳೆಯ ಬೃಹತ್ ಪ್ರತಿಭಟನೆಗೆ ಯುವ ಕಾಂಗ್ರೆಸ್ ಬೆಂಬಲ ಚುನಾವಣಾ ಆಯೋಗದ ಕಾರ್ಯವೈಖರಿ ಹಾಗೂ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಕುರಿತು ಗಂಭೀರ ಆರೋಪಗಳು ಕೇಳಿಬಂದಿರುವ ಹಿನ್ನೆಲೆಯಲ್ಲಿ, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆ ಹಾಗೂ ಅವರ ವಿರುದ್ಧ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ನಾಳೆ ಆಯೋಜಿಸಿರುವ ಬೃಹತ್ ಪ್ರತಿಭಟನೆಗೆ ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿ ಬೆಂಬಲ ಸೂಚಿಸಿದೆ. ಎಸ್‌ಐಆರ್ ಪ್ರಕ್ರಿಯೆಯ ವಿವಿಧ ನಿರ್ಧಾರಗಳಿಗೆ ಸಂಬಂಧಿಸಿದಂತೆ ಇಬ್ಬರು ಚುನಾವಣಾ ಆಯುಕ್ತರು ಕಳೆದ 10 ತಿಂಗಳಲ್ಲಿ 14 ಬಾರಿ ಆಕ್ಷೇಪ ವ್ಯಕ್ತಪಡಿಸಿದ್ದರು ಎಂಬ ವರದಿ ರಾಜ-ಕೀಯ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ.

ಈ ರೀತಿಯ ಏಕಪಕ್ಷೀಯವಾದ ನಿರ್ಧಾರಗಳು ಪ್ರಜಾಪ್ರಭುತ್ವಕ್ಕೆ ಮಾರಕವಾಗಿವೆ ಆದಕಾರಣ, ಯುವ ಕಾಂಗ್ರೆಸ್ ಕೆಪಿಸಿಸಿ ಜೊತೆಗೂಡಿ ನಾಳೆ ನಗರದ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ನಡೆಸಲಿದೆ. ಪ್ರಸ್ತುತ, ಚುನಾವಣಾ ಪ್ರಕ್ರಿಯೆಯ ಪಾರದರ್ಶಕತೆ, ಮತದಾರರ ಹಕ್ಕುಗಳ ರಕ್ಷಣೆ ಹಾಗೂ ಚುನಾವಣಾ ಆಯೋಗದ ವಿಶ್ವಾಸಾರ್ಹತೆಯ ಕುರಿತು ಸ್ವತಂತ್ರ ತನಿಖೆ ಅಗತ್ಯವಾಗಿದೆ. ಈ ವಿಚಾರವಾಗಿ ಕಾಂಗ್ರೆಸ್ ರಾಷ್ಟ್ರಮಟ್ಟದಲ್ಲಿ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆ, ಬಂಧನ ಮತ್ತು ಸ್ವತಂತ್ರ ಪರಿಶೀಲನೆಗೆ ಒತ್ತಾಯಿಸಿದೆ. ಪ್ರತಿಭಟನೆಯಲ್ಲಿ ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ರಾಜ್ಯಾಧ್ಯಕ್ಷ ಎಚ್.ಎಸ್.ಮಂಜುನಾಥ್ ಗೌಡ ಪಾಲ್ಗೊಳ್ಳಲಿದ್ದು, ನೂರಾರು ಯುವ ಕಾಂಗ್ರೆಸ್ ಪದಾಧಿಕಾರಿಗಳು ಭಾಗವಹಿಸಿ ಪ್ರತಿಭಟನೆಗೆ ಬೆಂಬಲ ನೀಡಲಿದ್ದಾರೆ.

> **“ 2024ರಿಂದೀಚೆಗೆ ಮೂರು ಪ್ರಮುಖ ರಾಜ್ಯಗಳ ವಿಧಾನಸಭೆ ಚುನಾವಣೆ ನಡೆದಿದೆ. ಅಲ್ಲಿನ ಫಲಿತಾಂಶವು ಅನುಮಾನ ಮೂಡಿಸಿದೆ. ಈ ಅವಧಿಯಲ್ಲಿ 6 ರಾಜ್ಯಗಳ ಪೈಕಿ, ನಾಲ್ಕು ಕಡೆ ಚುನಾವಣಾ ಮುಖ್ಯಾಧಿಕಾರಿಯನ್ನು ಅಲ್ಲಿನ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯಾಗಿದ್ದವರನ್ನೇ ನೇಮಿಸಲಾಗಿದೆ ಎಂದು ವಿವರಿಸಿದರು. ಈ ಎಲ್ಲಾ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಚುನಾವಣಾ ಆಯೋಗದ ವಿರುದ್ಧ ಟೀಕೆಗಳು ಕೇಳಿ ಬಂದರೆ, ಬಿಜೆಪಿಯವರು ಉತ್ತರ ನೀಡುತ್ತಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಆಯೋಗದ ಮುಖ್ಯ ಆಯುಕ್ತ ಜ್ಞಾನೇಶ್ ಕುಮಾರ್ ವಿರುದ್ಧ ನಾಳೆ ಬೆಂಗಳೂ-ರಿನಲ್ಲಿ ಪ್ರತಿಭಟನೆ ನಡೆಯಲಿದೆ. ನಂತರ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಪ್ರತಿಭಟನೆಗಳು ಮುಂದುವರಿಯಲಿವೆ ಎಂದು ಅವರು ವಿವರಿಸಿದರು.**

## ವಿಶ್ವವಿಖ್ಯಾತ ದಸರಾಗೆ ಸಿದ್ಧತೆ :ಅರಮನೆ ಆವರಣದಲ್ಲಿ ಫಿರಂಗಿ ತಾಲೀಮು

ಅ.ಶ. ಸುದ್ದಿ ಮೈಸೂರು

**ಮೈಸೂರು: ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾಗೆ ಸಿದ್ಧತೆಗಳು ಭರದಿಂದ ಸಾಗಿದ್ದು, ಅಂಬಾವಿಲಾಸ ಅರಮನೆ ಆವರಣದಲ್ಲಿಂದು ಫಿರಂಗಿಗಳಿಗೆ ಪೂಜೆ ಸಲ್ಲಿಸುವ ಮೂಲಕ ಪೂರ್ವ ತಾಲೀಮಗೆ ಚಾಲನೆ ನೀಡಲಾಯಿತು.**



ನಗರ ಪೊಲೀಸ್ ಆಯುಕ್ತರಾದ ಸೀಮಾ ಲಟ್ಕರ್ ಅವರ ನೇತೃತ್ವದಲ್ಲಿ 11 ಫಿರಂಗಿಗಳಿಗೆ ಪೂಜೆ ಸಲ್ಲಿಸಲಾಗಿದ್ದು, ಕುಶಾಲು ತೋಪುಗಳ ಸಿಡಿಮದ್ದು ವೇಳೆ ಯಾವುದೇ ಅವಘಡ ಸಂಭವಿಸದಂತೆ ಹಾಗೂ ಸುರಕ್ಷಿತವಾಗಿ ಕುಶಾಲು ತೋಪು ಸಿಡಿಸುವ ಹಿನ್ನೆಲೆಯಲ್ಲಿ ಫಿರಂಗಿ ಗಾಡಿಗಳನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಲು ಪೂಜೆ ಸಲ್ಲಿಸುವುದು ಸಂಪ್ರದಾಯ. ಜಂಬೂ ಸವಾರಿ ದಿನದಂದು ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ಸಲ್ಲಿಸುವ ಸಂದರ್ಭದಲ್ಲಿ 21 ಕುಶಾಲು ತೋಪು ಸಿಡಿಸುವುದು ವಾಡಿಕೆ. ಇದಕ್ಕಾಗಿ ಆನೆ ಮತ್ತು ಕುದುರೆಗಳು ಶಬ್ದಕ್ಕೆ ಬೆಚ್ಚಿ ಬೀಳದಂತೆ ನೋಡಿಕೊಳ್ಳಲು ಕುಶಾಲುತೋಪುಗಳನ್ನು ಸಿಡಿಸಿ ತರಬೇತಿ ನೀಡಲಾಗುತ್ತದೆ. ಈ ತಾಲೀಮಿನಲ್ಲಿ 35ಕ್ಕೂ ಹೆಚ್ಚು ಸಿಬ್ಬಂದಿಗಳು ಭಾಗವಹಿಸಲಿದ್ದು, ಪೂಜೆಯೊಂದಿಗೆ ದಸರಾ ಮಹೋತ್ಸವದ ಸಿದ್ಧತೆಗೆ ಚಾಲನೆ ದೊರೆತಂತಾಗಿದೆ.

# 2028ರಲ್ಲೂ ಡಿಕೆಶಿ ಮತ್ತೆ ಸಿಎಂ ಆದರೆ ನನ್ನ ಅಭ್ಯಂತರ ಇಲ್ಲ : ಸತೀಶ್ ಜಾರಕಿಹೊಳಿ

ಅ.ಶ. ಸುದ್ದಿ ಮೈಸೂರು

**ಮೈಸೂರು: ಮುಖ್ಯಮಂತ್ರಿಯಾಗಲು ತಮಗೆ ಆತುರವೇನಿಲ್ಲ. 2028ರ ವಿಧಾನಸಭಾ ಚುನಾವಣೆಯ ಬಳಿಕ ಡಿ.ಕೆ.ಶಿವಕುಮಾರ್ ಮತ್ತೆ ಮುಖ್ಯಮಂತ್ರಿಯಾಗುವುದಾದರೆ ತಮ ಅಭ್ಯಂತರ ಇಲ್ಲ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮಹತ್ವದ ಹೇಳಿಕೆ ನೀಡಿದ್ದಾರೆ.**

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2028ರ ಚುನಾವಣೆ ಬಳಿಕ ತಾವೇ ಮುಂದಿನ ಮುಖ್ಯಮಂತ್ರಿ ಎಂದು ಡಿ.ಕೆ.ಶಿವಕುಮಾರ್ ಎಲ್ಲಾ ಕಡೆ ಹೇಳಿಕೊಳ್ಳುತ್ತಿರುವುದಕ್ಕೆ ಪ್ರತಿಕ್ರಿಯಿಸಿದರು. ಅವರ ಪ್ರಯತ್ನಮತ್ತುಫಲ ಇದ್ದರೆ ಮತ್ತೆ ಡಿ.ಕೆ.ಶಿವಕುಮಾರ್ ಏಕೆ ಮುಖ್ಯಮಂತ್ರಿಯಾಗಬಾರದು? ಎಂದು ಪ್ರಶ್ನಿಸಿದರು. 2028ಕ್ಕೆ ತಾವು ಮುಖ್ಯಮಂತ್ರಿಯಾಗುವುದಾಗಿ ಹೇಳಿದ್ದು ನಿಜ. ಆದರೆ ಈಗ ಡಿ.ಕೆ.ಶಿವಕುಮಾರ್ ಪ್ರಯತ್ನ ಮಾಡುತ್ತಿದ್ದಾರೆ. ನನಗೆ ಇನ್ನೂ ವಯಸ್ಸಿದೆ. ಆತುರವೇನಿಲ್ಲ, ನಿರೀಕ್ಷೆಯಲ್ಲಿದ್ದೇನೆ. ಮೊದಲ ಸರದಿಯಲ್ಲಿರುವವರು ಅಧಿಕಾರ ಅನುಭವಿಸಿ ಸಮಾಧಾನದಿಂದ ಕೆಳಗಿಳಿಯಲಿ.

ನಾನು ಮುಖ್ಯಮಂತ್ರಿಯಾಗಲೇಬೇಕು ಎಂದು ಹೇಳಲಿಲ್ಲ, ನಮ ಸರ್ಕಾರ ಬಂದಾಗ ಸನ್ನಿವೇಶ ಆಧರಿಸಿ ತೀರ್ಮಾನಿಸುವುದಾಗಿ ಹೇಳಿದ್ದೆ. ಈಗಲೂ ಅದೇ ಹೇಳಿಕೆಗೆ ಬದ್ಧನಾಗಿದ್ದೇನೆ ಎಂದರು. ರಾಜಕೀಯವಾಗಿ ಕುಗ್ಗಿಸಲಿಕ್ಕಾಗಿಯೇ ಜಾರಿ ನಿರ್ದೇಶನಾಲಯ ದಾಳಿಯಾಗಿದೆ ಎಂಬುದು ಬೇರೆ ವಿಚಾರ. ನಾನು ಕುಗ್ಗುವ ಪ್ರಶ್ನೆಯೇ ಇಲ್ಲ. ದಿನನಿತ್ಯದ ಕೆಲಸಗಳನ್ನು ಮುಂದುವ-ರಿಸಲೇಬೇಕು. ಕಾನೂನು ಬದ್ಧವಾಗಿಯೇ ನಾನು ತನಿಖೆಯನ್ನು ಎದುರಿಸುತ್ತೇನೆ ಎಂದರು. ನೀಲಿ ಶಾಲು ವಿಚಾರವಾಗಿ ಮಾಜಿ ಸಂಸದ ಪ್ರತಾಪ್‌ಸಿಂಹ ಹೇಳಿಕೆಗೆ ಈಗಾಗಲೇ ಉತ್ತರ ನೀಡಲಾಗಿದೆ.

ನನಗೆ ಈ ಶಾಲಿನ ಮಹತ್ವಗೊತ್ತಿದೆ. ಅದಕ್ಕಾಗಿ ಶಾಲು ಹಾಕಿಕೊಂಡಿದ್ದೇನೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ನನ್ನ ಮತ್ತು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಡುವೆ ಸಂಬಂಧ ಚೆನ್ನಾಗಿದೆ. ಅವರು ಮುಖ್ಯಮಂತ್ರಿಯಾಗಿದ್ದಾಗಲೂ ಅಂತರ



ಕಾಯ್ದುಕೊಂಡಿದ್ದೆ. ಸಭೆ ಕರೆದಾಗ ಹೋಗುತ್ತಿದ್ದೆ. ಈಗಲೂ ಹಾಗೆಯೇ ಇದ್ದೇನೆ. ತಮ ಮೇಲೆ ಇಡಿ ದಾಳಿಯಾದಾಗ ಯತೀಂದ್ರ ಬಂದು ಭೇಟಿ ಮಾಡಿದ್ದಾರೆ. ಮನೆಗೆ ಒಬ್ಬರು ಬಂದರೆ ಸಾಕಲ್ಲವೇ? ಮನೆಮಂದಿಯಲ್ಲಾ ಬರಬೇಕೆ? ಎಂದು ಪ್ರಶ್ನಿಸಿದರು. ಅಹಿಂದದಲ್ಲಿ ಒಡಕ್ಕಿಲ್ಲ.

ಇತ್ತೀಚೆಗೆ ನಡೆದ ಹಿಂದುಳಿದ ವರ್ಗಗಳ ಸಮಾವೇಶ ಕಾರ್ಯಕ್ರಮದಲ್ಲಿ ಭಾಗವಹಿಸಿಲ್ಲ ಎಂದಾಕ್ಷಣಕ್ಕೆ ಒಡಕು ಇದೆ ಎಂದು ಭಾವಿಸಬೇಕಿಲ್ಲ. ಸಿದ್ದರಾಮಯ್ಯಅವರ ಜೊತೆ ಸದಾಕಾಲ ಒಂದು ಸೇನೆ ಇದ್ದೇ ಇದೆ. ಅದಕ್ಕೆ ಅವರೇ ನಾಯಕರು. ಅವರ ನಂತರ ನಾನು ಕ್ಯಾಪ್ಟನ್ ಎಂದು ಹೇಳಿದರು. ಜಾರಿ ನಿರ್ದೇಶನಾಲಯದಿಂದ ವಿಚಾರದಲ್ಲಿ ತಮಗೆ ಇನ್ನೂ ನೋಟೀಸ್ ಈವರೆಗೂ ಬಂದಿಲ್ಲ. ಶೀಘ್ರವೇ ಬರುವ ನಿರೀಕ್ಷೆ ಇದೆ. ತಮ ವಿರುದ್ಧ ಕೇಳಿಬಂದಿರುವ ಆರೋಪಗಳಿಗೆ ಮತ್ತು ಪ್ರಶ್ನೆಗಳಿಗೆ ಅಲ್ಲಿಯೇ ಉತ್ತರ ನೀಡುತ್ತೇನೆ. ನನ್ನ ಮೇಲೆ ಏಕೆ ದಾಳಿಯಾಗಿದೆ ಎಂಬುದಕ್ಕೆ ಉತ್ತರಿಸಲು ಸಮಯಬೇಕಾಗುತ್ತದೆ ಎಂದರು.

ಈವರೆಗಿನ ಇಡಿಯ ದಾಳಿಗಳು ಕೇವಲ ವಿರೋಧ ಪಕ್ಷದ ನಾಯಕರ ಮೇಲಷ್ಟೇ ಆಗಿದೆ. ಬಿಜೆಪಿಯವರ ಮೇಲೆ ಯಾವುದೇ ಕಾರ್ಯಾಚರಣೆಗಳಾಗಿಲ್ಲ. ದಾಳಿ ನೆಪದಲ್ಲಿ ಒತ್ತಡ, ರಾಜಕೀಯ ಕಿರುಕುಳ ಎಲ್ಲವೂ ನಿರೀಕ್ಷಿತ ಎಂದು ಹೇಳಿದರು. ಆರ್ಥಿಕ ಇಲಾಖೆ ಪತ್ರ ಬರೆಯುವುದು ಎಲ್ಲಾ ಕಾಲದಲ್ಲೂ ಸಾಮಾನ್ಯ. ಬಜೆಟ್ ಘೋಷಿತ ಎಲ್ಲಾ ಯೋಜನೆಗಳಿಗೂ ನಮಲ್ಲಿ ಹಣ ಇದೆ. ಆದರೆ ಹೊಸ ಯೋಜನೆಗಳ ಘೋಷಣೆಗೆ ಹಣ ಇಲ್ಲ. ಖರ್ಚಾಗದೇ ಉಳಿದ ಹಣದಲ್ಲಿ ಹೊಸ ಯೋಜನೆಗಳನ್ನು ಎಲ್ಲಾ ಸರ್ಕಾರಗಳು ಜಾರಿಗೊಳಿಸಿವೆ?. ಈಗ ನಮ ಬಳಿ ದುಡ್ಡಿಲ್ಲ ಅಂತೇನಿಲ್ಲ. ಆದರೆ ಹೊಸ ಯೋಜನೆಗಳಿಗೆ ಹಣ ಇಲ್ಲ ಎಂದರು.

# ಬರದ ಸ್ಥಿತಿಗತಿ ಅವಲೋಕಿಸಿದ ಜಿಲ್ಲಾಧಿಕಾರಿ ಹಾಗೂ ಸಿಇಓ

ಅ.ಶ. ಸುದ್ದಿ ಕನಕಗಿರಿ

**ಕನಕಗಿರಿ: ತಾಲೂಕಿನ ಹುಲಿಹೈದರ್ ಹಾಗೂ ಸುಳೇಕಲ್ ಗ್ರಾ.ಪಂ ವ್ಯಾಪ್ತಿಯ ಗ್ರಾಮಗಳಿಗೆ ಇಂದು ಜಿಲ್ಲಾಧಿಕಾ-ರಿಗಳಾದ ಸುರೇಶ್ ಬಿ ಹಿಟ್ನಾಳ್ ಹಾಗೂ ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವರ್ಣಿತ್ ನೇಗಿ ಅವರು ಭೇಟಿ ನೀಡಿ ಬರ ಪರಿಶೀಲನೆ ನಡೆಸಿದರು.**

ಈ ವೇಳೆ ರೈತರ ಜಮೀನುಗಳಿಗೆ ಭೇಟಿ ನೀಡಿದ ಅವರು, ರೈತರೊಂದಿಗೆ ಚರ್ಚಿಸಿ, ಬರ ಪರಿಸ್ಥಿತಿಯಿಂದ ಎದುರಾಗುತ್ತಿರುವ ಸಮಸ್ಯೆಗಳ ಕು-ರಿತು ಮಾಹಿತಿ ಸಂಗ್ರಹಿಸಿದರು.



ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು. ನಂತರ ಕೃಷಿಹೊಂಡ ಕಾಮಗಾರಿ ಹಾಗೂ ಕಲಿಕೇರಿ ಕೆರೆಗೆ ಭೇಟಿ ನೀಡಿ ಪರಿಶೀಲನೆ ನಡೆದರು. ಈ ವೇಳೆ ವಿಬಿಜಿರಾಮ್ ಜೀ ಯೋಜನೆಯಡಿ ಕೆಲಸ ನಿರ್ವಹಿಸುತ್ತಿರುವ ಕೂಲಿಕಾರ-ರಿಂದಲೂ ಮಾಹಿತಿಯನ್ನು ಪಡೆದರು. ಜೊತೆಗೆ ಗ್ರಾಮಗಳಲ್ಲಿನ ಕುಡಿಯುವ ನೀರು, ಜಾನುವಾರುಗಳಿಗೆ ಮೇವು ಮತ್ತು ನೀರಿನ ಲಭ್ಯತೆ, ಕೃಷಿ ಪರಿಸ್ಥಿತಿ ಹಾಗೂ ಉದ್ಯೋಗದ ಅಗತ್ಯತೆ ಸೇ-ರಿದಂತೆ ಬರ ಪರಿಸ್ಥಿತಿಗೆ ಸಂಬಂಧಿಸಿದ ವಿವಿಧ ವಿಷಯಗಳ ಕುರಿತು ಅಧಿಕಾ-ರಿಗಳಿಂದ ಮಾಹಿತಿ ಪಡೆದುಕೊಂಡರು.

ಈ ಸಂದರ್ಭದಲ್ಲಿ ತೋಟಗಾರಿಕೆ ಇಲಾಖೆ ಉಪನಿರ್ದೇಶಕರಾದ ಕೃಷ್ಣ ಉಕ್ಕುಂದ, ತಹಶೀಲ್ದಾರ್ ಚಂದ್ರಶೇಖರ್ ಗಾಳಿ, ಕಾರ್ಯನಿರ್ವಾಹಕ ಅಧಿಕಾರಿಗಳಾದ ಕೆ.ರಾಜಶೇಖರ್, ಸಹಾಯಕ ನಿರ್ದೇಶಕರಾದ ನಾಗೇಶ್ ಎಚ್. ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ಸಿಬ್ಬಂದಿಗಳು, ಗ್ರಾಮಸ್ಥರು ಉಪಸ್ಥಿತರಿದ್ದರು.

# ಬಿಡದಿ ಟೌನ್ ಶಿಪ್ : ಉಪವಾಸ ಸತ್ಯಾಗ್ರಹ ನಿರತ ರೈತರಿಗೆ ಧೈರ್ಯ ತುಂಬಿದ ದೇವೇಗೌಡರು

ಅ.ಶ. ಸುದ್ದಿ ಬಿಡದಿ

**ಬಿಡದಿ: ಬಿಡದಿ ಉಪನಗರ ಯೋಜನೆಯ ಭೂಸ್ವಾಧೀನವನ್ನು ವಿರೋಧಿಸಿ ಬೈರಮಂಗಲದಲ್ಲಿ ಅಹೋರಾತ್ರಿ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ರೈತರಿಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಧೈರ್ಯ ತುಂಬಿದ್ದಾರೆ. ಜೆಡಿ-ಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಬೈರಮಂಗಲಕ್ಕೆ ಭೇಟಿ ನೀಡಿ ಉಪವಾಸ ನಿರತ ರೈತರ ಆರೋಗ್ಯ ವಿಚಾರಿಸಿ, ಅವರ ಹೋರಾಟಕ್ಕೆ ಸಂಪೂರ್ಣ ಬೆಂಬಲ ಸೂಚಿಸಿದರು. ರೈತರ ಜೊತೆ ನೆಲದ ಮೇಲೆ ಕುಳಿತು**



ಅವರ ಸಮಸ್ಯೆಗಳನ್ನು ಆಲಿಸಿದರು.

ಇದೇ ವೇಳೆ, ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ದೂರವಾಣಿ ಮೂಲಕ ಪ್ರತಿಭಟನಾ ನಿರತ ರೈತರ ಜೊತೆ ಮಾತನಾಡಿ, ಧೈರ್ಯ ತುಂಬಿದರು. ರೈತರ ನ್ಯಾಯಯುತ ಹೋರಾಟದಲ್ಲಿ ತಾವು ಜೊತೆಗಿರುವುದಾಗಿ ಭರವಸೆ ನೀಡಿದರು. ಫಲವತ್ತಾದ ಕೃಷಿ ಭೂಮಿಯನ್ನು ಬಲವಂತವಾಗಿ ಸ್ವಾಧೀನಪಡಿಸಿಕೊಳ್ಳುತ್ತಿರುವ ರಾಜ್ಯ ಸರ್ಕಾರದ ಕ್ರಮದ ವಿರುದ್ಧ ಪ್ರತಿಭಟನೆ ನಡೆಸಿ ರೈತರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

# ಸಚಿವರ ಕ್ಷೇತ್ರದಲ್ಲೇ ಓಣಿ ರಸ್ತೆಗಳು ಹದಗೆಟ್ಟು ಜನರ ಪರದಾಟ

## 15, 16 ಹಾಗೂ 14ನೇ ವಾರ್ಡ್‌ಗಳಲ್ಲಿ ರಸ್ತೆ ಮಧ್ಯೆ ನಿಂತ ಕೊಳಚೆ ನೀರು; ಸಾಂಕ್ರಾಮಿಕ ರೋಗಗಳ ಭೀತಿ

ಅ.ಶ. ಸುದ್ದಿ ಕನಕಗಿರಿ



**ಕನಕಗಿರಿ: ಪಟ್ಟಣದ ವಿವಿಧ ವಾರ್ಡ್‌ಗಳಲ್ಲಿ ಕಳೆದ ಮೂರು ವರ್ಷಗಳಿಂದ ಚರಂಡಿ ನೀರು ಸರಾಗವಾಗಿ ಹರಿಯದೆ, ರಸ್ತೆ ಮಧ್ಯೆಯೇ ಕೊಳಚೆ ನೀರು ನಿಂತುಕೊಳ್ಳುತ್ತಿರುವುದರಿಂದ ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಸಮಸ್ಯೆ ಬಗೆಹರಿಸುವಲ್ಲಿ ಪಟ್ಟಣ ಪಂಚಾಯಿತಿ ಸಿಬ್ಬಂದಿಯ ವೈಫಲ್ಯವೇ ಕಾರಣ ಎಂದು ಸ್ಥಳೀಯರು ಆರೋಪಿಸಿದ್ದಾರೆ.**

ಪಟ್ಟಣದ 14, 15 ಹಾಗೂ 16ನೇ ವಾರ್ಡ್‌ಗಳ ಹಲವೆಡೆ ರಸ್ತೆ ಮಧ್ಯದಲ್ಲಿ ನೀರು ನಿಂತಿದ್ದು, ಸಾರ್ವಜನಿಕರು ಹಾಗೂ ವಾಹನ ಸವಾರರು ಸಂಚರಿಸಲು ಪರದಾಡುವಂತಾಗಿದೆ. ಚರಂಡಿ ನೀರು ನಿಂತಿರುವುದರಿಂದ ಸುತ್ತಮುತ್ತಲಿನ ಪ್ರದೇಶದಲ್ಲಿ ದುರ್ವಾಸನೆ ಹರಡುತ್ತಿದ್ದು, ಜನರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ನಿವಾಸಿಗಳು ಅಳಲು ತೋಡಿಕೊಂಡಿದ್ದಾರೆ.

"ಡೆಂಗಿ, ಮಲೇರಿಯಾ ಭೀತಿ" :ರಸ್ತೆಗಳಲ್ಲಿ ಕೊಳಚೆ ನೀರು ನಿಂತಿರುವುದರಿಂದ ಸೊಳ್ಳೆಗಳ ಹಾವಳಿ ಹೆಚ್ಚಾಗಿದ್ದು, ಡೆಂಗಿ, ಮಲೇರಿಯಾ ಸೇರಿದಂತೆ ವಿವಿಧ ಸಾಂಕ್ರಾಮಿಕ ರೋಗಗಳು ಹರಡುವ ಆತಂಕ ಸಾರ್ವಜನಿಕರಲ್ಲಿ ಮನೆಮಾಡಿದೆ. ವಿಶೇಷವಾಗಿ ಶಾಲಾ ಮಕ್ಕಳು, ವೃದ್ಧರು ಹಾಗೂ ಪ್ರತಿನಿತ್ಯ ಈ ಮಾರ್ಗದಲ್ಲಿ ಸಂಚರಿಸುವ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ.

ಶಾಲಾ ಮಕ್ಕಳು ಕೊಳಚೆ ನೀರು ನಿಂತಿರುವ ರಸ್ತೆಗಳಲ್ಲಿಯೇ ಓಡಾಡಬೇಕಾದ ಪರಿಸ್ಥಿತಿ ಎದುರಾಗಿದೆ. ದುರ್ವಾಸನೆ ಹಾಗೂ ಅಸ್ವಚ್ಛ ವಾತಾವರಣದಿಂದ ಮಕ್ಕಳ ಆರೋಗ್ಯದ ಬಗ್ಗೆಯೂ ಪೋಷಕರು ಆತಂಕ ವ್ಯಕ್ತಪಡಿಸಿದ್ದಾರೆ.



"ಶಾಶ್ವತ ಪರಿಹಾರಕ್ಕೆ ಆಗ್ರಹ:"ಕಳೆದ ಮೂರು ವರ್ಷಗಳಿಂದ ಸಮಸ್ಯೆ ಮುಂದುವರಿದಿದ್ದರೂ, ಪಟ್ಟಣ ಪಂಚಾಯಿತಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಸೂಕ್ತ ಕ್ರಮ ಕೈಗೊಂಡಿಲ್ಲ ಎಂದು ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಕೇವಲ ತಾತ್ಕಾಲಿಕವಾಗಿ ನೀರು ತೆರವುಗೊಳಿಸುವ ಬದಲು, ಚರಂಡಿ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ಮಿಸಿ, ರಸ್ತೆ ಕಾಮಗಾರಿಯನ್ನು ಕೈಗೊಂಡು ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

> **"16, 15 ಹಾಗೂ 14ನೇ ವಾರ್ಡ್‌ಗಳ ರಸ್ತೆ ಮಧ್ಯೆ ನೀರು ನಿಂತು, ಸೊಳ್ಳೆಗಳ ಉತ್ಪತ್ತಿಗೆ ಕಾರಣವಾಗಿದೆ. ಡೆಂಗ್ಯೂ, ಮಲೇರಿಯಾ ಸೇರಿದಂತೆ ಹಲವು ರೋಗಗಳು ಹರಡುವ ಆತಂಕದಿಂದ ಜನರು ಭಯಭೀತರಾಗಿದ್ದಾರೆ. ಶಾಲಾ ಮಕ್ಕಳು ಹಾಗೂ ಸಾರ್ವಜನಿಕರು ಇದೇ ದಾರಿಯಲ್ಲಿ ಸಂಚರಿಸುತ್ತಿದ್ದು, ದುರ್ವಾಸನೆಯಿಂದ ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಂಡು, ನಿಂತ ನೀರು ತೆರವುಗೊಳಿಸಬೇಕೆಂದು ಜನರು ಆಗ್ರಹಿಸಿದ್ದಾರೆ.**
> **ಅಮರೇಶ್ ಗಡದ್ 15ನೇ ವಾರ್ಡಿನ ಸ್ಥಳೀಯರು ಕನಕಗಿರಿ.**

> **"ವಾರ್ಡಿನಲ್ಲಿ ರಸ್ತೆ ನಿರ್ಮಾಣಕ್ಕಾಗಿ ಹಲವು ಬಾರಿ ಮನವಿ ಸಲ್ಲಿಸಿದರೂ, ಬಜೆಟ್ ಕೊರತೆಯ ಕಾರಣ ನೀಡಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತಿಲ್ಲ. ಹದಗೆಟ್ಟ ರಸ್ತೆಯಿಂದ ವಾರ್ಡಿನ ನಿವಾಸಿಗಳು ಹಾಗೂ ಶಾಲಾ ಮಕ್ಕಳು ಪ್ರತಿನಿತ್ಯ ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಮಳೆಗಾಲದಲ್ಲಿ ರಸ್ತೆ ಸ್ಥಿತಿ ಮತ್ತಷ್ಟು ಹದಗೆಟ್ಟು ಸಂಚಾರಕ್ಕೆ ಸಮಸ್ಯೆಯಾಗುತ್ತಿದೆ. ಅಧಿಕಾರಿಗಳು ಕೂಡಲೇ ಕ್ರಮ ಕೈಗೊಂಡು ರಸ್ತೆ ನಿರ್ಮಾಣಕ್ಕೆ ಅಗತ್ಯ ಅನುದಾನ ಬಿಡುಗಡೆ ಮಾಡಬೇಕೆಂದು ವಾರ್ಡಿನ ಜನರು ಒತ್ತಾಯಿಸಿದ್ದಾರೆ.**

ಪಟ್ಟಣ ಪಂಚಾಯಿತಿ ಅಧಿಕಾರಿಗಳು ಕೂಡಲೇ ಸ್ಥಳ ಪರಿಶೀಲನೆ ನಡೆಸಿ, ಚರಂಡಿ ನೀರು ಸರಾಗವಾಗಿ ಹರಿಯುವಂತೆ ಕ್ರಮ ಕೈಗೊಳ್ಳಬೇಕು. ರಸ್ತೆ ಮಧ್ಯೆ ನಿಂತಿರುವ ಕೊಳಚೆ ನೀರನ್ನು ತೆರವುಗೊಳಿಸಿ, ಸೊಳ್ಳೆಗಳ ನಿಯಂತ್ರಣಕ್ಕೆ ಔಷಧ ಸಿಂಪಡಿಸಬೇಕು. ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ತುರ್ತು ಕ್ರಮ ಕೈಗೊಳ್ಳಬೇಕು ಎಂದು ವಾರ್ಡ್‌ಗಳ ನಿವಾಸಿಗಳು ಆಗ್ರಹಿಸಿದ್ದಾರೆ.

## ಸತೀಶ್ ಜಾರಕಿಹೊಳಿಗೆ ಮತ್ತಷ್ಟು ಸಂಕಷ್ಟ : ಮತ್ತೊಂದು ಹಂತ ತಲುಪಿದ ಇಡಿ ತನಿಖೆ

ಅ.ಶ. ಸುದ್ದಿ ಇಂಡಿ

**ಬೆಂಗಳೂರು: ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹಾಗೂ ಅವರ ಕುಟುಂಬಸ್ಥರು, ಆಪ್ತರಿಗೆ ಸಂಬಂಧಿಸಿದ ಆಸ್ತಿಗಳು ಮತ್ತು ವಿದೇಶಿ ಹೂಡಿಕೆಗಳ ಕುರಿತು ಜಾರಿನಿರ್ದೇಶನಾಲಯ (ಇಡಿ) ನಡೆಸುತ್ತಿರುವ ತನಿಖೆ ಇದೀಗ ಮತ್ತೊಂದು ಹಂತಕ್ಕೆ ತಲುಪಿರುವ ಮಾಹಿತಿ ಹೊರಬಿದ್ದಿದೆ.**



ಸೆಪ್ಟೆಂಬರ್ 9–10ರಂದು ನಡೆದ ಶೋಧ ಕಾರ್ಯಾಚರಣೆ ಬಳಿಕ ವಶಪಡಿಸಿಕೊಂಡ ದಾಖಲೆಗಳು, ಡಿಜಿಟಲ್ ಸಾಧನಗಳು ಹಾಗೂ ಹಣಕಾಸು ವ್ಯವಹಾರಗಳ ಪರಿಶೀಲನೆ ಮುಂದುವರಿದಿದ್ದು,

ಪ್ರಕರಣದ ತನಿಖೆಯನ್ನು ದೆಹಲಿ ಘಟಕದ ಅಧಿಕಾರಿಗಳು ಮುಂದುವರಿಸುವ ಸಾಧ್ಯತೆ ಬಗ್ಗೆ ಚರ್ಚೆ ನಡೆದಿದೆ. ಆದರೆ ಬೆಂಗಳೂರು ತನಿಖೆಯನ್ನು ಅಧಿಕೃತವಾಗಿ ದೆಹಲಿಗೆ ವರ್ಗಾಯಿಸಲಾಗಿದೆ. ಇಡಿಯ ಬೆಂಗಳೂರು ವಲಯ ಕಚೇರಿ ಸತೀಶ್ ಜಾರಕಿಹೊಳಿ, ಅವರ ಕುಟುಂಬಸ್ಥರು ಹಾಗೂ ಆಪ್ತರಿಗೆ ಸಂಬಂಧಿಸಿದ ಬೆಂಗಳೂರು, ಬೆಳಗಾವಿ, ಗೋಕಾಕ ಮತ್ತು ಕೋಲ್ಕತ್ತಾದ 21 ಸ್ಥಳಗಳಲ್ಲಿ ಶೋಧ ನಡೆಸಿತ್ತು. ಸತೀಶ್ ಜಾರಕಿಹೊಳಿ ಅವರ ಡಾಲರ್ಸ್ ಕಾಲೋನಿ ನಿವಾಸ, ಗೋಕಾಕದ ನಿವಾಸ, ಕಚೇರಿ ಸೇರಿದಂತೆ ಪುತ್ರಿ ಹಾಗೂ ಚಿಕ್ಕೋಡಿ ಸಂಸದೆ ಪ್ರಿಯಾಂಕಾ ಜಾರಕಿಹೊಳಿ, ಪುತ್ರ ರಾಹುಲ್ ಜಾರಕಿಹೊಳಿ, ಸಂಬಂಧಿಕರು ಮತ್ತು ಆಪ್ತರ ಆಸ್ತಿಗಳೂ ಶೋಧಕ್ಕೆ ಒಳಪಟ್ಟಿದ್ದವು. ಇಡಿ ಅಧಿಕೃತ ಮಾಹಿತಿಯ ಪ್ರಕಾರ, ಶೋಧದ ವೇಳೆ 3.3 ಕೋಟಿ ನಗದು ಮತ್ತು ಸುಮಾರು 15 ಲಕ್ಷ ಮೌಲ್ಯದ ವಿದೇಶಿ ಕರೆನ್ಸಿ ವಶಪಡಿಸಿಕೊಳ್ಳಲಾಗಿದೆ. ವಿದೇಶಿ ಹೂಡಿಕೆಗಳಿಗೆ ಸಂಬಂಧಿಸಿದ ದಾಖಲೆಗಳು ಹಾಗೂ ಡಿಜಿಟಲ್ ಸಾಧನಗಳನ್ನೂ ವಶಪಡಿಸಿಕೊಂಡಿರುವುದಾಗಿ ಸಂಸ್ಥೆ ತಿಳಿಸಿದೆ. ಪಿಡಬ್ಲ್ಯುಡಿ ಕಾಮಗಾರಿ–ವಿದೇಶಿ ಹೂಡಿಕೆ ತನಿಖೆ ಈ ಪ್ರಕರಣದ ಪ್ರಮುಖ ಆಯಾಮವಾಗಿ ಲೋಕೋಪಯೋಗಿ ಇಲಾಖೆಯ ಗುತ್ತಿಗೆಗಳು ಮತ್ತು ವಿದೇಶಿ ಹೂಡಿಕೆಗಳ ನಡುವಿನ ಹಣದ ಹರಿವು ತನಿಖೆಯಲ್ಲಿದೆ. ಇಡಿ ಪ್ರಕಾರ, ಭಾರತ್ ವಾಣಿಜ್ಯ ಈಸ್ಟರ್ನ್ ಪ್ರೈವೇಟ್ ಲಿಮಿಟೆಡ್ ಎಂಬ ಕಂಪನಿಗೆ ಸಂಬಂಧಿಸಿದ ಸ್ಥಳಗಳಲ್ಲೂ ಶೋಧ ನಡೆದಿದ್ದು, ಪಿಡಬ್ಲ್ಯುಡಿ ಗುತ್ತಿಗೆ ಪಡೆಯಲು ಕಂಪನಿಯು ಲಂಚ ನೀಡಿದೆ ಎಂಬ ಆರೋಪದ ಬಗ್ಗೆ ತನಿಖೆ ನಡೆಯುತ್ತಿದ್ದು, ಆ ಹಣವನ್ನು ವಿದೇಶಿ ಆಸ್ತಿಗಳನ್ನು ಪಡೆಯಲು ಬಳಸಲಾಗಿದೆಯೇ ಎಂಬುದನ್ನು ಪರಿಶೀಲಿಸುತ್ತಿದೆ. ಈ ಹಿನ್ನೆಲೆಯಲ್ಲಿ ಪಿಡಬ್ಲ್ಯುಡಿ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ, ಗುತ್ತಿಗೆದಾರರಿಂದ ನಡೆದಿರುವ ಹಣಕಾಸು ವ್ಯವಹಾರಗಳು, ಸಂಬಂಧಿತ ವ್ಯಕ್ತಿಗಳ ಬ್ಯಾಂಕ್ ಖಾತೆಗಳು ಹಾಗೂ ವಿದೇಶಿ ಕಂಪನಿಗಳಲ್ಲಿನ ಹೂಡಿಕೆಗಳನ್ನು ಪರಸ್ಪರ ಜೋಡಿಸಿ ತನಿಖೆ ನಡೆಸಲಾಗುತ್ತಿದೆ. ಇಡಿ ಬಿಡುಗಡೆ ಮಾಡಿರುವ ಮಾಹಿತಿಯ ಪ್ರಕಾರ, ಸತೀಶ್ ಜಾರಕಿಹೊಳಿ ಅವರ ಕುಟುಂಬದ ಸದಸ್ಯರು ಕಾಂಗೋದ ಎಲ್ಡೋರೋಡ ಮೈನಿಂಗ್ ರಿಸೋರ್ಸ್ ಮತ್ತು ಜಾಂಬಿಯಾದ ನವ ಆರೂಮ್ ಮೈನಿಂಗ್ ಲಿಮಿಟೆಡ್ ಸೇರಿದಂತೆ ಹಲವು ವಿದೇಶಿ ಕಂಪನಿಗಳಲ್ಲಿ ಷೇರುಪಾಲು ಹೊಂದಿರುವ ಕುರಿತು ದಾಖಲೆಗಳು ಪತ್ತೆಯಾಗಿವೆ ಎಂದು ಸಂಸ್ಥೆ ಹೇಳಿದೆ. ಇದೇ ವೇಳೆ ಸತೀಶ್ ಜಾರಕಿಹೊಳಿ ಅವರು ಕಾಂಗೋದಲ್ಲಿರುವ ಮ್ಯಾಗ್ನಿಟ್ಯೂಡ್ ಸ್ಟಾರ್ ಎಸ್ ಆರ್‌ಎಲ್ ಎಂಬ ಚಿನ್ನದ ಗಣಿಗಾರಿಕೆ ಸಂಸ್ಥೆಯಲ್ಲಿ ಸುಮಾರು 40% ಪಾಲು ಹೊಂದಿರುವುದಾಗಿ ಇಡಿ ಹೇಳಿದೆ. ಕಾಂಗೋದಲ್ಲಿನ ಸಂಸ್ಥೆಯೊಂದಕ್ಕೆ ದೊಡ್ಡ ಪ್ರಮಾಣದ ಹಣವನ್ನು ನಗದು ರೂಪದಲ್ಲಿ, ಅಧಿಕೃತ ಮಾರ್ಗಗಳಿಗೆ ಹೊರತಾದ ರೀತಿಯಲ್ಲಿ ಹೂಡಿಕೆ ಮಾಡಿರುವ ಸುಳಿವು ಸಿಕ್ಕಿದೆ ಎಂದೂ ಸಂಸ್ಥೆ ಹೇಳಿದೆ. ಇವು ಇಡಿ ತನಿಖೆಯಲ್ಲಿನ ಆರೋಪಗಳು ಮತ್ತು ಪ್ರಾಥಮಿಕ ತನಿಖಾ ಅಂಶಗಳು ಮಾತ್ರವಾಗಿದ್ದು, ನ್ಯಾಯಾಲಯದಲ್ಲಿ ತಪ್ಪು ಸಾಬೀತಾಗಿರುವುದಿಲ್ಲ.

## ರೈತಪರ ಸಂಘಟನೆಗಳ ಕೆರೆ ತುಂಬಿಸುವ ಹೋರಾಟಕ್ಕೆ ಬಿ.ಡಿ. ಪಾಟೀಲ ಬೆಂಬಲ

ಅ.ಶ. ಸುದ್ದಿ ಇಂಡಿ

**ಇಂಡಿ: ಇಂಡಿ ತಾಲೂಕಿನ ಸಮಗ್ರ ಕೆರೆಗಳಿಗೆ ನೀರು ತುಂಬಿಸುವಂತೆ ಆಗ್ರಹಿಸಿ ಭಾರತೀಯ ಕಿಸಾನ್ ಸಂಘ ಹಾಗೂ ವಿವಿಧ ರೈತಪರ ಸಂಘಟನೆಗಳ ವತಿಯಿಂದ ಜೋಡಗುಡಿಯ ವಿಜಯಪುರ?ಇಂಡಿ ಮುಖ್ಯರಸ್ತೆಯ ಅಂಚಿನಲ್ಲಿ ಹಮ್ಮಿಕೊಂಡಿದ್ದ ಹೋರಾಟಕ್ಕೆ ಜೆಡಿಎಸ್ ಮುಖಂಡರಾದ ಬಿ.ಡಿ. ಪಾಟೀಲ ಅವರು ಬೆಂಬಲ ವ್ಯಕ್ತಪಡಿಸಿದರು.**

ಈ ಸಂದರ್ಭದಲ್ಲಿ ಮಾತನಾಡಿದ ಅವರು, "ಹಿಂಗಾರು ಹಾಗೂ ಮುಂಗಾರು ಸಂಪೂರ್ಣ ಹಾಳಾಗಿದ್ದು, ಮಳೆಯ ಕೊರತೆಯಿಂದ ರೈತರ ಬದುಕು ಸಂಕಷ್ಟಕ್ಕೆ



ಸಿಲುಕಿದೆ. ರೈತರ ಜಾನುವಾರುಗಳಿಗೆ ಮೇವಿನ ಕೊರತೆ ಉಂಟಾಗಿರುವುದರಿಂದ ಕೂಡಲೇ ಗೋಶಾಲೆಗಳನ್ನು ಆರಂಭಿಸಬೇಕು" ಎಂದು ಆಗ್ರಹಿಸಿದರು. ಮಹಾರಾಷ್ಟ್ರದಲ್ಲಿ ಉತ್ತಮ ಮಳೆಯಾಗಿದ್ದು, ಆಲಮಟ್ಟಿ ಅಣೆಕಟ್ಟು ಸಂಪೂರ್ಣ ಭರ್ತಿಯಾಗಿದೆ.

ಇಂತಹ ಸಂದರ್ಭದಲ್ಲಿ ಇಂಡಿ ತಾಲೂಕಿನ ಕೆರೆಗಳಿಗೆ ನೀರು ತುಂಬಿಸುವ ಮೂಲಕ ರೈತರಿಗೆ ಅನುಕೂಲ ಕಲ್ಪಿಸಬೇಕು. ಕೆರೆಗಳು ತುಂಬಿದರೆ ಹಳ್ಳ–ಕೊಳ್ಳಗಳು ಹಾಗೂ ಬಾವಿಗಳಲ್ಲಿ ಅಂತರ್ಜಲ ಮಟ್ಟ ಹೆಚ್ಚಾಗಿ, ಕುಡಿಯುವ ನೀರು ಹಾಗೂ ಕೃಷಿಗೆ ಅನುಕೂಲವಾಗಲಿದೆ. ಆದ್ದರಿಂದ ಸಂಬಂಧಪಟ್ಟ ಇಲಾಖೆ ಹಾಗೂ ಜನಪ್ರತಿನಿಧಿಗಳು ಕೂಡಲೇ ಕ್ರಮ ಕೈಗೊಂಡು ತಾಲೂಕಿನ ಕೆರೆಗಳಿಗೆ ನೀರು ತುಂಬಿಸಬೇಕು ಎಂದು ಒತ್ತಾಯಿಸಿದರು. ರೈತರ ನ್ಯಾಯಬದ್ಧ ಬೇಡಿಕೆಗಳನ್ನು ನಿರ್ಲಕ್ಷಿಸದೆ ತುರ್ತಾಗಿ ಸ್ಪಂದಿಸಬೇಕು.

ಜಾನುವಾರುಗಳ ರಕ್ಷಣೆಗಾಗಿ ಗೋಶಾಲೆ ಆರಂಭಿಸುವುದು ಸೇರಿದಂತೆ ರೈತರ ಸಂಕಷ್ಟಕ್ಕೆ ಸರ್ಕಾರ ಕೂಡಲೇ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಬಿ.ಡಿ. ಪಾಟೀಲ ಆಗ್ರಹಿಸಿದರು. ಈ ಸಂದರ್ಭದಲ್ಲಿ ಗುರುನಾಥ ಬಗಲಿ, ಶಾಂತಪ್ಪ ಖಿಸ್ಕಿ, ರಾಮಣ್ಣ ತಳವಾರ, ವಿಶ್ವನಾಥ ನೇಕಾರ, ಗುರಣ್ಣ ಬಿರಾದಾರ, ನಿಂಗಪ್ಪ ಪಾತಾಳಿ, ಶೇಖಪ್ಪ ಬಿರಾದಾರ, ಲಾಲಸಾಬ ಹೂಗಾರ, ಮಂಜುನಾಥ ತೇಲಿ, ರವಿ ಮಸಳಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಸಶಕ್ತ ಸಮಾಜ ನಿರ್ಮಾಣಕ್ಕೆ ಕೈಜೋಡಿಸಿ:ಜಿ ಬಿ ಬಡಿಗೇರ

ಅ.ಶ. ಸುದ್ದಿ ಇಂಡಿ

**ಇಂಡಿ: ತಾಲ್ಲೂಕಿನ ತಡವಲಗಾ ಗ್ರಾಮದಲ್ಲಿ ಇಂದು ರಾಷ್ಟ್ರೀಯ ಪೋಷಣಾ ಮಾಸಾಚರಣಯನ್ನು ಅದ್ದೂರಿಯಾಗಿ ಆಚರಿಸಲಾಯಿತು. ಈ ಕಾರ್ಯಕ್ರಮವನ್ನು ತಡವಲಗಾ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಶ್ರೀಮತಿ ಸುನಂದಾ ವಾಲಿಕಾರ ಹಾಗೂ ತಡವಲಗಾ ವಲಯ ಮೇಲ್ವಿಚಾರಕರಾದ ಜಿ ಬಿ ಬಡಿಗೇರ ಅವರು ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಭಾರತವನ್ನು ವೈವಿಧ್ಯಮಯ ಆರೋಗ್ಯಪೂರ್ಣ ಖಾದ್ಯಗಳ ತವರು ಆರೋಗ್ಯಕರ ಮತ್ತು ಸಶಕ್ತ ಸಮಾಜದ ನಿರ್ಮಾಣಕ್ಕೆ ತಾವೂ ಎಲ್ಲರೂ ಕೈಜೋಡಿಸಿದಾಗ ಮಾತ್ರ ಸಶಕ್ತ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದ ಅವರು 'ಸಮತೋಲಿತ ಪೌಷ್ಟಿಕ ಆಹಾರ' ತಳಹದಿಯಾಗಿದೆ.**

ಭಾರತದಲ್ಲಿ ಅಪೌಷ್ಟಿಕತೆ, ರಕ್ತಹೀನತೆ (ಅನಿಮಿಯಾ), ಮತ್ತು ಪೋಷಕಾಂಶಗಳ ಕೊರತೆಯನ್ನು ನೀಗಿಸುವ ಉದ್ದೇಶದಿಂದ ಭಾರತ ಸರ್ಕಾರವು ಪ್ರತಿ ವರ್ಷ ಸೆಪ್ಟೆಂಬರ್



1 ರಿಂದ ಸೆಪ್ಟೆಂಬರ್ 30 ರವರೆಗೆ 'ರಾಷ್ಟ್ರೀಯ ಪೋಷಣಾ ಮಾಸಾಚರಣೆ'ಯನ್ನು ಆಚರಿಸುತ್ತದೆ. ?ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ನೇತೃತ್ವದಲ್ಲಿ, "ಪೋಷಣ್ ಅಭಿಯಾನ" ಯೋಜನೆಯಡಿಯಲ್ಲಿ ಈ ಕಾರ್ಯಕ್ರಮವನ್ನು ದೇಶಾದ್ಯಂತ ಹಮ್ಮಿಕೊಳ್ಳಲಾಗುತ್ತದೆ. ಮುಖ್ಯವಾಗಿ ಗರ್ಭಿಣಿಯರು, ಬಾಣಂತಿಯರು, ನವಜಾತ ಶಿಶುಗಳು, ಬೆಳೆಯುವ ಮಕ್ಕಳು ಹಾಗೂ ಹದಿಹರೆಯದ ಹೆಣ್ಣುಮಕ್ಕಳಲ್ಲಿ ಪೌಷ್ಟಿಕಾಂಶದ ಅರಿವು ಮೂಡಿಸುವುದು ಇದರ ಮುಖ್ಯ ಉದ್ದೇಶವಾಗಿದೆ.

"ಸಹಿ ಪೋಷಣ್, ದೇಶ್ ರೋಷನ್" (ಸರಿಯಾದ ಪೋಷಣೆ – ದೇಶಕ್ಕೆ ಬೆಳಕು) ಎಂಬ ಆಶಯದೊಂದಿಗೆ, ಸಮಾಜದ ಪ್ರತಿಯೊಬ್ಬರಿಗೂ ಪೌಷ್ಟಿಕ ಆಹಾರದ ಮಹತ್ವವನ್ನು ತಲುಪಿಸಲು ಈ ಮಾಸಾಚರಣೆಯು ಶ್ರಮಿಸುತ್ತದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಗರ್ಭಿಣಿಯರಿಗೆ ಸೀಮಂತ ಕಾರ್ಯಕ್ರಮ ಹಾಗೂ ಮಕ್ಕಳ ಹುಟ್ಟು ಹಬ್ಬವನ್ನು ಆಚರಿಸಲಾಯಿತು.ಈ ಸಂದರ್ಭದಲ್ಲಿ ಪತ್ರಕರ್ತರಾದ ಸಚೀನ ಇಂಡಿ ಹಾಗೂ ಅಂಗನವಾಡಿ ಕಾರ್ಯಕರ್ತೆಯರಾದ ಬಿ ಟಿ ತಳವಾರ, ಮಾದೇವಿ ಮಠಪತಿ ಶೋಭಾ ಹೋಟಗಾರ ಸುರೇಖಾ ಮಂಕಣಿ ಸುನೀತಾ ಕಬ್ಬಲಗಿ ಲಲಿತಾ ಬೋಗಾರ ಶಾರದಾ ಜೇವೂರ ಮಾದೇವಿ ಡೊಂಬರ ದೀಪಾ ಚನಗೊಂಡ ಕಲಾವತಿ ಬಣಗಾರ ಲಕ್ಷ್ಮೀ ದಶವಂತ ಶೆಕುಂತಲಾ ವಾಲಿಕಾರ ರಾಜಶ್ರೀ ಪೂಜಾರಿ ಜಯಶ್ರೀ ಚವ್ಹಾಣ ಪೂಜಾ ರಾಠೋಡ ಸುಭದ್ರಾ ಕಟ್ಟಿ ನಿಖಿತಾ ರಾಠೋಡ ಶೈಲಾ ಯಾದವಾಡ ಹಾಗೂ ಈ ಕಾರ್ಯಕ್ರಮವನ್ನು ಮಲ್ಲಮ್ಮ ಬ್ಯಾಳಿ ಸ್ವಾಗತಿಸಿದರು.ರೂಪಾ ಮಿರಗಿ ನಿರೂಪಿಸಿದರು.

## 'ವಚನಾಮೃತ'

ಹಸಿದಿರಲು ತನುವು ಬಸಿಯದಿರಿ
ರಸವನೆಂತು ಕತ್ತಲಾಟಕೆ ಕೊಳಚೆ
ಬಟ್ಟೆಯೊಳ್ ಸಾಗದಿರಿ!.
ಕಾಲಕೆ ಮಾಯೆ ಅಡರಿ
ಕೃಶಗೊಳಲು ಕಾಯ ಬಸಿದುದೆಲ್ಲವ
ಹಿಂಪಡೆಯಲಾದಿತೆ ಸತ್ಯವಾಣಿ!!.



ವಾಣಿ ಭಂಡಾರಿ.

## ಮುಂದುವರೆದ ರೈತರ ಹೋರಾಟ : ಧರಣಿ ಸತ್ಯಾಗ್ರಹ





ಅ.ಶ. ಸುದ್ದಿ ಇಂಡಿ

**ಇಂಡಿ: ಭಾರತೀಯ ಕಿಸಾನ ಸಂಘ ಇಂಡಿ ಘಟಕದ ರೈತ ಸಂಘದ ಕಾರ್ಯಕರ್ತರು ಜೋಡಗುಡಿ ಹತ್ತಿರ ಇಂಡಿ ತಾಲೂಕು ಬರಗಾಲವೆಂದು ಘೋಷಿಸಬೇಕು, ತಾಲೂಕಿನ ಎಲ್ಲ ಕೆರೆಗಳಿಗೆ ನೀರು ಹರಿಸಬೇಕು ಮತ್ತು ಸರಿಯಾದ ವಿದ್ಯುತ್ ನೀಡಬೇಕು ಎಂದು ಆಗ್ರಹಿಸಿ ಇಂಡಿ ವಿಜಯಪುರ, ಅಕ್ಕಲಕೋಟ ವಿಜಯಪುರ ಹೆದ್ದಾರೆ ಬಂದು ಮಾಡಿ ಬೃಹತ ಪ್ರಮಾಣದಲ್ಲಿ ಪ್ರತಿಭಟನೆ ನಡೆಸಿದ್ದು ರಾತ್ರಿ 10 ಗಂಟೆಯ ವರೆಗೂ ಅಧಿಕಾರಿಗಳು ರೈತರ ಮನವೊಲಿಸಲು ಪ್ರಯತ್ನಿಸಿದರು ಫಲ ನೀಡಲಿಲ್ಲ.**

ಸ್ಥಳಕ್ಕೆ ಕೃಷ್ಣಾ ಮೇಲ್ದಂಡೆ ಯೋಜನೆ ಮುಖ್ಯ ಅಭಿಯಂತರರು ಬರಬೇಕು ಮತ್ತು ನೀರು ಬೀಡುವ ಕುರಿತು ಲಿಖಿತ ರೂಪದಲ್ಲಿ ಕೊಡಬೇಕು ಅಲ್ಲಿಯ ವರೆಗೆ ಧರಣಿ ಮುಂದುವರೆಸುವದಾಗಿ ಹೇಳಿದರು. ಕೃಷ್ಣಾ ಕಾಲುವೆಯ ಮುಖ್ಯ ಅಭಿಯಂತರರು ಅಧಿವೇಷನ ನಿಮಿತ್ತ ಬೆಂಗಳೂರಿಗೆ ಹೋಗಿದ್ದು ಶುಕ್ರವಾರ ಬಂದ ನಂತರ ಅವರ ಕಾರ್ಯ ನೋಡಿಕೊಂಡು ಮುಂದಿನ ತೀರ್ಮಾನ ಕೈಕೊಳ್ಳುತ್ತೇವೆ. ಅಲ್ಲಿಯ ವರೆಗೆ ಧರಣಿ ಮುಂದೆ ವರೆಸುವದಾಗಿ ತಿಳಿಸಿದರು. ಮಂಗಳವಾರ ಪ್ರತಿಭಟನಾ ಸ್ಥಳಕ್ಕೆ ಕಂದಾಯ ಉಪವಿಬಾಗಾಧಿಕಾರಿ ಚಿದಾನಂದ ಗುರುಸ್ವಾಮಿ, ತಹಸೀಲ್ದಾರ ನಾಗೇಂದ್ರ ಕೋಳಶೆಟ್ಟಿ ಡಿವಾಯ್ ಎಸ್ ಪಿ ಸದಾಶಿವ ಕಟ್ಟಿಮನಿ ಕೃಷ್ಣಾ ಮೇಲ್ದಂಡೆ ಯೋಜನೆಯ ಅಧಿಕ್ಷಕ ಅಭಿಯಂತರ ಗೋವಿಂದ ರಾಠೋಡ ಸೇರಿದಂತೆ ಅನೇಕರು ರೈತರ ಮನವೊಲಿಕೆಗೆ ಪ್ರಯತ್ನಿಸಿದರು.

ಭಾರತೀಯ ಕಿಸಾನ ಸಂಘದ ಉತ್ತರ ಪ್ರಾಂತ ಪ್ರಮುಖ ಗುರುನಾಥ ಬಗಲಿ, ಮಲ್ಲನಗೌಡ ಪಾಟೀಲ, ಈರಣ್ಣ ಗೋಟ್ಯಾಳ, ನಾಗಪ್ಪ ಮಕಣಿ, ಚನ್ನಪ್ಪ ಮಿರಗಿ, ಶಿವಲಿಂಗಪ್ಪ ಕಟ್ಟಿ , ಬಾಬು ಡೊಂಬರ ಪ್ರಕಾಶ ಇಂಡಿ ಶರಣಪ್ಪ ತಾರಾಪುರ ಅಂಬಣ್ಣ ಪಂತೋಜಿ, ಆನಂದ ಹೊಟಕರ, ಧರೆಪ್ಪ ತೇಲಿ, ಶೇಖರ ಇಂಡಿ ರವಿ ಮೇತ್ರಿ ಶಂಕ್ರೆಪ್ಪ ರೂಗಿ ಭೀಮರಾಯ ಭುಕ್ಯಾಣಿ ಧರೆಪ್ಪ ಮೇತ್ರಿ ಮತ್ತಿತ ರೈತರು ಇದ್ದರು.

## ಗಣೇಶ ಹಬ್ಬದ ಬಳಿಕ ಜೋಕುಮಾರಸ್ವಾಮಿಯ ಅಳಲು; ಹೊಲದ ಮಧ್ಯೆ ಮಣಿಸುವ ವಿಶಿಷ್ಟ ಜಾನಪದ ಆಚರಣೆ

ಅ.ಶ. ಸುದ್ದಿ ಕುಕನೂರು

**ಕುಕನೂರು: ಗಣೇಶ ಹಬ್ಬ ಮುಗಿದ ನಂತರ ಭಾದ್ರಪದ ಅಷ್ಟಮಿ ದಿನ ಹುಟ್ಟುವ ಜೋಕುಮಾರ ಸ್ವಾಮಿಯು ತಳವಾರ ಅಥವಾ ಗಂಗಾಮತಸ್ಥ ಸಮಾಜದಲ್ಲಿ ಹುಟ್ಟುತ್ತಾನೆ. ಜೋಕುಮಾರನನ್ನು ಮಹಿಳೆಯರು ಮಣ್ಣಿನಿಂದ ಮಾಡಿ ಮೂರ್ತಿಯನ್ನು ಬಿದರಿನ ಬುಟ್ಟಿಯಲ್ಲಿ ಬೇವಿನ ತಪ್ಪಲುಗಳಿಂದ ಶೃಂಗರಿಸಿ, ತಲೆಯ ಮೇಲೆ ಹೊತ್ತು ಮನೆ ಮನೆಗೆ ಮೆರವಣಿಗೆ ತರುತ್ತಾರೆ.**

ಸಂಪ್ರದಾಯ: ಮನೆಗಳಿಗೆ ಬಂದಾಗ ಮಹಿಳೆಯರು ಹಾಡನ್ನು ಹಾಡುತ್ತಾ ಧಾನ್ಯ, ರೊಟ್ಟಿ, ಬೆಣ್ಣೆಯನ್ನು ಕಾಣಿಕೆಯಾಗಿ ಪಡೆಯುತ್ತಾರೆ. ಜೋಕುಮಾರನು ಭೂಲೋಕದ ಕಷ್ಟಗಳನ್ನು ಶಿವನಿಗೆ ತಿಳಿಸಿ ಧರೆಗೆ ಮಳೆ ಸುರಿಸುವಂತೆ ಮಾಡುತ್ತಾನೆ, ಇದರಿಂದ ಬತ್ತಿದ ಕೆರೆಗಳು ತುಂಬುತ್ತವೆ ಮತ್ತು ಹಾಲು ನೀಡದ ಗೊಡ್ಡು



ದನಗಳು ಹೈನಾಗುತ್ತವೆ ಹಾಲು ಕೊಡುತ್ತವೆ ಎಂಬುದು ರೈತರ ಅಚಲವಾದ ನಂಬಿಕೆಯಾಗಿದೆ. ಹೊಲದ ಮಧ್ಯೆ ಅಳಲು ಮಣಿಸುವ ವಾಡಿಕೆ ಜೋಕುಮಾರಸ್ವಾಮಿಯ ಅಳಲನ್ನು ಪಡೆದ ಬಳಿಕ ಅದನ್ನು ಹೊಲಗಳಿಗೆ ತೆಗೆದುಕೊಂಡು ಹೋಗಿ, ಹೊಲದ ಮಧ್ಯಭಾಗದಲ್ಲಿ ತೆಗ್ಗು ತೆಗೆದು ಮಣಿಸುವುದು ಈ ಆಚರಣೆಯ ಪ್ರಮುಖ ಭಾಗವಾಗಿದೆ. ರೈತರು ಜೋಕುಮಾರನ ಅಳಲನ್ನು ಹೊಲದ ಮಧ್ಯದಲ್ಲಿ ಮಣಿಸಿದರೆ ಹಸನಾದ ಮಳೆ ಬಂದು, ಉತ್ತಮ ಬೆಳೆ ಬೆಳೆದು, ಭೂಮಿ ಸಮೃದ್ಧಿಯಾಗುತ್ತದೆ ಎಂಬ ವಾಡಿಕೆ ಹಾಗೂ ಗ್ರಾಮೀಣ ಜನರ ನಂಬಿಕೆ ಇದೆ.

ಮಳೆ ಬೆಳೆಯನ್ನೇ ಅವಲಂಬಿಸಿರುವ ರೈತ ಸಮುದಾಯದಲ್ಲಿ ಈ ಆಚರಣೆಗೆ ವಿಶೇಷವಾದ ಮಹತ್ವವಿದೆ. ಉತ್ತಮ ಮಳೆಯಾಗಿ ಕೆರೆ?ಕಟ್ಟೆಗಳು ತುಂಬಿ, ಜಮೀನುಗಳಲ್ಲಿ ಸಮೃದ್ಧ ಬೆಳೆ ಬರಲಿ, ರೈತರ ಬದುಕು ಹಸನಾಗಲಿ ಎಂಬ ಆಶಯವೂ ಈ ಜಾನಪದ ಆಚರಣೆಯಲ್ಲಿದೆ. ಮಹಿಳೆಯರ ಹಾಡಿನಲ್ಲಿ ಮಳೆ–ಬೆಳೆಯ ಆಶಯ ಜೋಕುಮಾರಸ್ವಾಮಿಯ ಆಚರಣೆಯ ಸಂದರ್ಭದಲ್ಲಿ ಮಹಿಳೆಯರು ಗುಂಪಾಗಿ ಜಾನಪದ ಹಾಡುಗಳನ್ನು ಹಾಡುತ್ತಾ, ಅಡ್ಡಡ್ಡ ಮಳೆ ಬಂದು ದೊಡ್ಡ ದೊಡ್ಡ ಕೆರೆ ತುಂಬಿ, ಗೊಡ್ಡುಗಳೆಲ್ಲಾ ಹೈನಾಗಿ ಜೋಕುಮಾರ, ಮಡಿವಾಳ ಕೇರಿ ಹೊಕ್ಕಾನ ಜೋಕುಮಾರ, ಮುಡಿ ತುಂಬ ಹೂವ ಮುಡಿದ ಚೆಲುವಿನ ಅಗಸರ ಕೇರಿ ಹೊಕ್ಕಾನ ಜೋಕುಮಾರ,

ಅಕ್ಕ ತಂಗೇರ ಒಲವಿನ ಜೋಕುಮಾರ ಎಂದು ಹಾಡುತ್ತಾ, ಮನೆಮನೆಗೆ ತೆರಳುವುದು ವಿಶೇಷ. ಹಾಡುಗಳಲ್ಲಿ ಜೋಕುಮಾರಸ್ವಾಮಿಯ ಕಥೆ, ಅಳಲು ಹಾಗೂ ಮಳೆ–ಬೆಳೆಯ ಕುರಿತ ಆಶಯಗಳು ವ್ಯಕ್ತವಾಗುತ್ತವೆ. ಗಣೇಶ ಹಬ್ಬದ ನಂತರ ನಡೆಯುವ ಈ ಆಚ–'ರಣೆ ಗ್ರಾಮೀಣ ಜನರ ನಂಬಿಕೆ, ಕೃಷಿ ಸಂಸ್ಕೃತಿ ಮತ್ತು ಮಹಿಳೆಯರ ಜಾನಪದ ಪರಂಪರೆಯ ಪ್ರತೀಕವಾಗಿ ಇಂದಿಗೂ ಮುಂದುವರಿದಿದೆ. ತಲೆಮಾರುಗಳಿಂದ ಬಂದಿರುವ ಈ ವಾಡಿಕೆಯನ್ನು ಇಂದಿನ ಪೀಳಿಗೆಯೂ ಮುಂದುವರಿಸಿಕೊಂಡು ಹೋಗುತ್ತಿರುವುದು ಗ್ರಾಮೀಣ ಸಂಸ್ಕೃತಿಯ ವಿಶೇಷತೆಯಾಗಿದೆ.

# ಲೇಖಕರ ದಿನಚರಿ...

# ನಿಜಶಕ್ತಿ



ತರವಲ್ಲ ಬರಿ ಮಾತು ತಂಪಿ ರದ ಮಲರಂತೆ;
ಬಂದೀತೆ ನಿಜ ಶಕ್ತಿ ಬರಡು ಮಾತಿಂದ?
ತೂಕವಿಲ್ಲದ ವಾಣಿ ಕಳೆಯುಳಿದ ಹೊಲದಂತೆ!
ಮೌನ ಬಾಳಿನ ಆಸ್ತಿ
ಮುದ್ದುರಾಮ...

ಮಾನವನ ನಿಜಶಕ್ತಿ ಅಂತರ್ಯದರಿವಿನಲ್ಲಿದೆ. ಹಲವಾರು ಬಾರಿ ನಮ್ಮ ವಾಣಿ ನಮ್ಮನ್ನು ಪ್ರತಿನಿಧಿಸುತ್ತದೆ. ನಮ್ಮ ವಾಕ್ಯಗಳು ಆಂತರ್ಯದ ಅಭಿವ್ಯಕ್ತಿಯಾಗಿರಬೇಕು ಪ್ರಚೋದನೆಯಲ್ಲಿ ಸಿಲುಕಿದ ಅಪಹಾಸ್ಯವಾಗಬಾರದು. ವಿವೇಕ ಶೂನ್ಯನಾದವನ ಉಕ್ತಿಗಳು ಅಪಹಾಸ್ಯಕ್ಕ ಡೆಯಾಗುತ್ತವೆ. ಮೌನದಲ್ಲಿ ಅಡಕವಾದ ಅಭಿವ್ಯಕ್ತಿ ನಮ್ಮತನಕ್ಕೆ ಅನ್ವರ್ಥ ವಾಗಬೇಕು. ಅವಸರದಲ್ಲಿ ಆಡಿದ ಮಾತುಗಳು ತೂಕಕ್ಕೆ ಬರಲಾರವು. ಆಪಕ್ವತೆಯು ನಮ್ಮ ಉಕ್ತಿಗಳಲ್ಲಿ ಎದ್ದು ತೋರುತ್ತದೆ ಹೀಗಾಗಿ ಸಂತರ [illegible] ಜ್ಞಾನಿಗಳ ಮುಖದಿಂದ ಹೊರಟ [illegible] ಪ್ರಾಮುಖ್ಯತೆ ಇರುತ್ತದೆ.

ನಮ್ಮೊಳಗಿನ ಸತತ ಸಂವಹನಕ್ಕೆ ಯಾವ ಅಡೆತಡೆಗಳಿರುವುದಿಲ್ಲ ಅದೊಂದು ನಿತ್ಯ ನಿರ್ಮಲ ನೀರಿನಂತೆ ಪ್ರವಹಿಸುತ್ತದೆ. ಮತ್ತು ಅದು ಅಪರಿಭಿನ್ನತೆಯ ನಿಲುವಾಗಿರುತ್ತದೆ. ಸಂಯಮ ಮೀರಿದ ನಡತೆ ವಾಕ್ಯಗಳು ಅಪಸೌಖ್ಯವನ್ನು ಕೊಡುತ್ತವೆ. ಚಿಂತನೆಯಲ್ಲಿ ಮಾಗಿದ ನಡೆ-ನುಡಿಗಳು ಮುತ್ತಿನ ತೋರಣದಂತೆ ಶೋಭಾಯಮಾನವಾಗಿರುತ್ತವೆ. ಅದೇ ನಮ್ಮ ಬದುಕಿನ ಅಪೂರ್ವಾರ್ಥ ಲಬ್ಧಿ ಆಗಿರುತ್ತವೆ. ಪ್ರತಿಯೊಂದು ಕ್ರಿಯೆಗೆ ಪ್ರತಿಕ್ರಿಯೆ ನೀಡುವುದು ಅವಶ್ಯಕವೇ? ಕೆಲವೊಮ್ಮೆ ನಮ್ಮ ಮೌನ ಸಾವಿರ ಮಾತುಗಳಿಗೆ ಮೀರಿದ ಉತ್ತರ ನೀಡಬಹುದು. ಇದು ಮಾತಿಗಿಂತ ಮಿಗಿಲಾದ ಉತ್ತರವಾಗಿರುತ್ತದೆ.

ಸಾವಿರ ಜನರಿಗಿಂತ ಮೌನಿ ಭಿನ್ನವೆನಿಸಿಕೊಳ್ಳುತ್ತಾನೆ ಏಕೆಂದರೆ ಅವನ ಒಳಗಿನ ನಿಜ ಸತ್ಯ ಮೌನಸಂವಹನ ವಾಗಿರುತ್ತದೆ. ಗ್ರಹಿಕೆಯ ಮಾರ್ಗ ಮೌನವಾಗಿರುತ್ತದೆ. ಇದರಿಂದ ನಾವು ಏನನ್ನು ಕಳೆದುಕೊಳ್ಳುವುದಿಲ್ಲ ಗ್ರಹಿಕೆಯಿಂದ ಸಂಯಮ, ತಾಳ್ಮೆ, ಸದ್ವಿವೇಕ ವೃದ್ಧಿಸುತ್ತದೆ.

ನಮ್ಮ ಅಪೂರ್ವ ಬಲವಾಗಿ ಅಪ್ರತಿಮರೂಪವಾಗಿ ಮೌನ ಗುರುತಿಸಿಕೊಳ್ಳುತ್ತದೆ. ಹರಿಯುವ ನದಿಯ ಆಳ ಮೌನವಾಗಿರುತ್ತದೆ. ಅಂತೆಯೇ ಪ್ರವೇಕನಾದವನ ಅಂತರ್ಯ ಏಕಾಂತ ಗೀತೆಯಂತೆ ಸುಶ್ರಾವ್ಯ ವಾಗಿರುತ್ತದೆ. ಅನಗತ್ಯ ವಾಣಿಗಳಿಗೆ ಅಲ್ಲಿ ಅವಕಾಶಗಳಿರುವುದಿಲ್ಲ. ಚಿಂತನೆಯ ಸದೃಶ ರೂಪ ಮೌನವಾಗಿದ್ದು ಕಡುವೈರಿಯನ್ನು ಮೌನದ ಪ್ರಹಾರದಿಂದ ಸೋಲಿಸಬಹುದಾಗಿದೆ. ಮೌನ ನೀಡುವ ವಿವರಣೆ ಅಪ್ರಮತ್ತತೆಯಿಂದ ಕೂಡಿರುತ್ತದೆ.

ನಮ್ಮ ವ್ಯಕ್ತಿತ್ವದ ಅಭಿವರ್ಧನೆಗೆ ಅನುಭಾವದಲಿ ಮಾಗಿದ ದೃಷ್ಟಿ ಬೇಕು. ಅದು ಮೌನಿಯಾಗಿದ್ದಾಗ ಮಾತ್ರ ಸಾಧ್ಯ. ಎಲ್ಲರ ಅಭಿಮತಕ್ಕಾಗಿ ತಡವರಿಸಿ ಉತ್ತರಿಸಿ, ಪ್ರತಿಕ್ರಿಯಿ ಸುವುದರ ಬದಲಾಗಿ ಅಭೀ ತಮನದವರಾಗಿ ಅಭಿಮತ ಕೇಳಿದಾಗ ಉತ್ತರಿಸಿದವನೇ ಮಾನ್ಯನಾಗುತ್ತಾನೆ. ನಮ್ಮ ನಿಜಗಳಿಕೆ ಮೌನದಲ್ಲಿರುತ್ತದೆ. ಅದು ಹಣಕ್ಕಿಂತ ಮಿಗಿಲಾಗಿರುತ್ತದೆ ಮಾತುಗಳ ಮಿತವ್ಯಯದಲ್ಲಿ ಬಳಸಿದಾಗ ಪರಿಪೂರ್ಣರಾಗುತ್ತೇವೆ.

ಮಾತು ,ಮೌನದ ನಡುವಿರುವ ಅಂತರ ಸೂಕ್ಷ್ಮವಾಗಿರುತ್ತದೆ. ಮಾತನ್ನು ಬಳಸುವ ಮುನ್ನ ಅದರ ಪ್ರತಿಧ್ವನಿಸುವಿಕೆಯ ಅರಿವು ನಮಗಿರಬೇಕು. ಮಾತು ಹತೋಟಿಯಲ್ಲಿರಬೇಕು. ಅಪ ಶಬ್ದಗಳು ಮಾರ್ಧನಿಸುತ್ತವೆ ಅರಿವಿನಲ್ಲಿ ಮಾಗಿದ ಮೌನ ನಮ್ಮ ಬಲ ,ನಮ್ಮ ಅಶಕ್ತತೆಯಲ್ಲ. ಮೌನ ನಮ್ಮ ಅನುಪಸ್ಥಿತಿಯಲ್ಲ ಬದುಕಿನ ಪ್ರತಿಯೊಂದು ಪ್ರತಿಫಲನಕ್ಕೆ ಮೌನ ಸಾಕ್ಷಿಯಾಗಿರುತ್ತದೆ. ನಮ್ಮ ಪರಿಪೂರ್ಣತ್ವದ ಅರ್ಥ ಸ್ಪಷ್ಟತೆಗೆ ಮೌನ ಅರ್ಥಾನುರೂಪವಾಗಿರುತ್ತದೆ. ಹೀಗಾಗಿ ಮೌನದ ಮಹತ್ವವನ್ನ ಅರಿತು ಬಾಳೋಣ ಅಲ್ಲವೇ?..



ಆರತಿ ಏನ್ ರಾವ್

## ಪುಟಿದೇಳುವ

ಮತ್ತೆ ಮತ್ತೆ ಪುಟಿದೇಳುವ
ಗತ್ತು ಮತ್ತಿಗೆ ವಿರಮಿಸಿ
ಸೋಲು ಗೆಲವು ಮತ್ತೆರದಂತೆ.

ಸುತ್ತಿಗೆ ಬಡಿತಕೆ ಮೆತ್ತಗಾಗದೇ
ಭಿತ್ತಿ ಪತ್ರದಿ ಮೂಡಿಬರುವೆ
ಹೊಸ ತನದ ದಿಗಂತದಂತೆ.

ಮುತ್ತಿನ ಸವಿಗೆ
ವಿಪತ್ತನು ಜಯಿಸಿ
ಅಪತ್ತಿನ ಮೇರೆ ಮೀರುವಂತೆ.

ಚಪಲ ಚಂಚಲ ಕಡೆಗಣಿಸಿ
ಧೃಢತೆಯ ಮೈಗೂಡಿಸಿ
ಸಮಭಾವ ಸವಿ ಲಹರಿ ಹಾಡುವಂತೆ

ಕಾಲದ ಜೊತೆಯಲಿ
ಅಂಧಕಾರ ಕಳೆಯುತ
ಜ್ಞಾನ ಕಣಜದಿ ಮಿಂದೇಳುವಂತೆ.

ಬಿದ್ದ ಜಾಗದಿ ಎದ್ದು
ಜಿದ್ದಾ ಜಿದ್ದಿನ ಕಣದಿ
ಮುದ್ದು ಮಾಡುವ ಸುದ್ದಿ ಜಾಹೀರಾತು ಆದಂತೆ.

ಸಹಿಷ್ಣುತೆಯ ಸಾಕಾರ
ಪ್ರಯತ್ನದ ಬೀಜ ಬಿತ್ತಿ
ಸಮರ್ಪಣಾ ಭಾವ ಲಹರಿ ಫಲ ಬಿಟ್ಟಂತೆ.



ರೇಷ್ಮಾ ಕಂದಕೂರ

## ಜೀವನ

ಜೀವನವೆಂಬುದು ಒಂದು ಸುಂದರ ಪಯಣ,
ಪ್ರತಿ ಹೆಜ್ಜೆಯಲ್ಲೂ ಹೊಸತೊಂದು ಪಾಠ.
ಸೋಲು ಬಂದರೂ ಕುಗ್ಗಬಾರದು ಮನ,
ಗೆಲುವು ಬಂದರೂ ಮರೆಯಬಾರದು ವಿನಯ.
ಕಣ್ಣೀರಿನ ಹಿಂದೆ ನಗುವಿದೆ,
ಕತ್ತಲೆಯ ಹಿಂದೆ ಬೆಳಕಿದೆ.
ಬಿದ್ದಾಗ ಮತ್ತೆ ಏಳುವುದೇ ಧೈರ್ಯ,
ಕಷ್ಟದಲ್ಲೂ ಕನಸು ಕಾಣುವುದೇ ಜೀವನ.
ನಿನ್ನೆ ಕಳೆದ ಕಥೆಯಾದರೆ,
ಇಂದು ನಮ್ಮ ಕೈಯಲ್ಲಿರುವ ಅವಕಾಶ.

# ಸೌಂದರ್ಯ ಸ್ಪರ್ಧೆಯು... ಬದುಕಿನ ಪದರ ಎಂಬ ಗೌನು



ಸಾಮಾನ್ಯವಾಗಿ ಬ್ಯೂಟಿ ಪೇಜಂಟ್ಗಳಲ್ಲಿ ಭಾಗವಹಿಸುವ ಸುಂದರಿಯರು ಧರಿಸುವ ದಿರಿಸಿಗೆ ಅವರ ಸೌಂದರ್ಯವನ್ನು ಎತ್ತಿ ಹಿಡಿಯುವ ಆಕರ್ಷಕ ವ್ಯಕ್ತಿತ್ವವನ್ನು ತೋರುವ ಹಲವಾರು ವಿವಿಧ ಆಯಾಮಗಳು ಇರುತ್ತವೆ. ಆದರೆ ಅತ್ಯಂತ ಪ್ರತಿಷ್ಠಿತವಾದ ಸೌಂದರ್ಯ ಸ್ಪರ್ಧೆಯೊಂದರಲ್ಲಿ ಹಾಗೆ ಧ-ರಿಸುವ ದಿರಿಸನ್ನು ಅರ್ಥಪೂರ್ಣವಾಗಿ ತೋ-ರಿಸಲು ಸಾಧ್ಯವಾಗಿದ್ದು ಹೀಗೆ.
ಕಳೆದ ವಾರ ವಿಯೆಟ್ನಾಂನಲ್ಲಿ ನಡೆದ ಮಿಸ್ ವರ್ಲ್ಡ್ ಸೌಂದರ್ಯ ಸ್ಪರ್ಧೆಯಲ್ಲಿ ಉಗಾಂಡಾದ ಮಿಸ್ ವರ್ಲ್ಡ್ ಸ್ಪರ್ಧಿ ಟ್ರೇವಿಯ ಎಲ್ಲೇ ಮುಹೂಜಾ ಧರಿಸಿದ ಪೇಜಂಟ್ ಗೌನ್ ಬಹಳಷ್ಟು ಜನರ ಗಮನ ಸೆಳೆಯಿತು.
ಆಕೆ ಧರಿಸಿದ ಗೌನಿನಲ್ಲಿ ಏಳು ಪದರಗಳು ಇದ್ದು ಅದಕ್ಕೆ ಲೇಯರ್ಸ್ ಆಫ್ ಲೈಫ್ ಎಂದು ಕರೆಯಲಾಗಿತ್ತು. ಅತ್ಯಂತ ಸುಂದರವಾದ ವಿನ್ಯಾಸ ಹೊಂದಿದ ದಿರಿಸು ಎಂಬ ಪ್ರಶಂಸೆಗೆ ಆ ದಿರಿಸು ಪಾತ್ರವಾಯಿತು. ಬಟ್ಟೆ, ವರ್ಣ ಮತ್ತು ಬೆಳಕಿನ ಅದ್ಭುತ ಸಂಯೋಜನೆಯ ಈ ಗೌನ್ ಸಹಜವಾಗಿಯೇ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದ್ದರೆ ಅದು ಅಚ್ಚರಿ ಏನಲ್ಲ.
ಈ ಸುಂದರವಾದ ಪದರಗಳನ್ನು ಹೊಂದಿದ ಗೌನ್ ಹಿಂದೆ ಒಂದು ಅರ್ಥಪೂರ್ಣವಾದ ಕಥೆ ಇದೆ. ತಾಯಿಯ ಹೊಟ್ಟೆಯಿಂದ ಹೊರ ಬರುವ ಮಗು ಸಿ ಸೆಕ್ಷನ್ ಎಂದು ಕರೆಯಲ್ಪಡುವ ಸಿಜೇರಿಯನ್ ಚಿಕಿತ್ಸೆಯ ಮೂಲಕ ಆಕೆಯ ಹೊಟ್ಟೆಯ ಏಳು ಪದರಗಳನ್ನು ಸೀಳಿ ಇಲ್ಲವೇ ಕತ್ತರಿಸಲ್ಪಟ್ಟು ಈ ಲೋಕದಲ್ಲಿ ಕಾಲಿಡುತ್ತದೆ.
ಹಾಗೆ ಮಗು ಈ ಲೋಕಕ್ಕೆ ಕಾಲಿಡುವ ಪಯಣದ ಹಾದಿಯ ವಿವರಗಳನ್ನು ಹೆಣ್ಣು ಮಗಳ ಹೊಟ್ಟೆಯಿಂದ ಬಟ್ಟೆಯ ಗೌನಿನ ಮೂಲಕ ಇಲ್ಲಿ ತೋರಿಸಲಾಗಿತ್ತು.
ನಿಜವಾಗಿಯೂ ಇದೊಂದು ಸ್ಪೂರ್ತಿಯೇ ಸರಿ... ಜೊತೆಗೆ ಕ್ರಾಂತಿಕಾರಕ ಕೂಡ.
ಸಿಜೆರಿಯನ್ ಶಸ್ತ್ರಚಿಕಿತ್ಸೆಯು ಜಾಗತಿ-ಕವಾಗಿ ಅತ್ಯಂತ ಪ್ರಮುಖ ಶಸ್ತ್ರ ಚಿಕಿತ್ಸೆಗಳಲ್ಲಿ ಒಂದು. ಅಮೆರಿಕಾದ ಪ್ರತಿ ಮೂರು ಮಕ್ಕಳಲ್ಲಿ ಒಂದು ಮಗು ಸಿಸೇರಿಯನ್ ಶಸ್ತ್ರಚಿಕಿತ್ಸೆಯ ಮೂಲಕವೇ ಜನಿಸುತ್ತದೆ.... ಆದರೂ ಕೂಡ ಈ ಶಸ್ತ್ರ ಚಿಕಿತ್ಸೆಯನ್ನು ಅತ್ಯಂತ ಕಡಿಮೆ ಪ್ರಶಂಶಿಸಲು ಕಾರಣ ಬಹುತೇಕ ಇದರ ಬಳಕೆಯ ದುರುಪಯೋಗ ಇರಬಹುದು.
ಒಂದು ಮಗುವನ್ನು ಅನಾಯಾಸವಾಗಿ ಈ ಭೂಮಿಗೆ ತರಲು ಸಿಸೇರಿಯನ್ ಶಸ್ತ್ರಚಿಕಿತ್ಸೆಯ ಮೊರೆ ಹೋಗುವ ವೈದ್ಯರು ಒಟ್ಟು ಏಳು ವಿವಿಧ ಪದರಗಳಲ್ಲಿ ಗರ್ಭಿಣಿಯರ ಹೊಟ್ಟೆಯನ್ನು ಸೀಳುತ್ತಾ ಹೋಗುತ್ತಾರೆ. ಮೊದಲ ಪದರ ಚರ್ಮ, ಎರಡನೆಯ ಪದರ ಕೊಬ್ಬು, ಮೂರನೆಯ ಪದರ ಸ್ನಾಯು ಮತ್ತು ಅಂಗಾಂಶಗಳನ್ನು ಜೋಡಿಸುವ ತಂತುಕೋಶ, ನಾಲ್ಕನೆಯ ಪದರ ಫಾಸಿಯ ಅಂದರೆ ಸ್ನಾಯುಗಳ ಹಂದರ ಮತ್ತು ಐದನೆಯ ಪದರ ಹೊಟ್ಟೆಯ ಭಾಗ,
ಆರನೆಯ ಪದರ ಗರ್ಭಕೋಶ ಹಾಗೂ ಅಂತಿಮವಾಗಿ ಗರ್ಭಕೋಶದಲ್ಲಿರುವ ಮಗುವನ್ನು ಸುತ್ತುವರೆದಿರುವ ನೀರಿನಿಂದ ಕೂಡಿದ ಗರ್ಭಚೀಲ
ಹೀಗೆ ಒಟ್ಟು ಏಳು ಪದರಗಳನ್ನು ಅತ್ಯಂತ ಸೂಕ್ಷ್ಮವಾಗಿ ಕತ್ತರಿಸುತ್ತಾ ಹೋಗುತ್ತಾರೆ....
ಇದೆಲ್ಲವೂ ಸ್ಥಾನೀಯ ಅರವಳಿಕೆಯನ್ನು ನೀಡಿರುವ ಗರ್ಭಿಣಿಯು ಎಚ್ಚರವಾಗಿರುವ ಜಾಗೃತ ಸ್ಥಿತಿಯಲ್ಲಿ ನಡೆಯುತ್ತಿರುತ್ತದೆ. ಎಲ್ಲವನ್ನು ತನ್ನ ಅರೆ ಪ್ರಜ್ಞಾವಸ್ಥೆಯಲ್ಲಿ ಆಕೆ ಗಮನಿಸುತ್ತಿದ್ದು ತನ್ನ ಮಗುವಿನ ಅಳುವಿನ ಕರೆಗಾಗಿ ನಿರೀಕ್ಷಿಸುತ್ತಿರುತ್ತಾಳೆ.
ಮನುಷ್ಯ ಶರೀರವು ಮಾಡಿಸಿಕೊಳ್ಳಲೇಬೇಕಾದ ಶಸ್ತ್ರ ಚಿಕಿತ್ಸೆಗಳಲ್ಲಿ ತಮ್ಮ ಮಗುವನ್ನು ಅತ್ಯಂತ ಸುರಕ್ಷಿತವಾಗಿ ಈ ಭೂಮಿಗೆ ತರಲು ಗರ್ಭಿಣಿ ಸ್ತ್ರೀಯರಿಗೆ ಈ ಸಿಜೇರಿಯನ್ ಶಸ್ತ್ರ ಚಿಕಿತ್ಸೆ ಅತ್ಯವಶ್ಯಕವಾದದ್ದು ಪ್ರಸ್ತುತ ಸೌಂದರ್ಯ ಸ್ಪರ್ಧೆಯಲ್ಲಿ ಹೆಣ್ಣು ಮಕ್ಕಳು ತಮ್ಮ ಬದುಕಿನಲ್ಲಿ ಕಡ್ಡಾಯವಾಗಿ ಹೊಂದುವ ಸಿಸೇರಿಯನ್ ಶಸ್ತ್ರಚಿಕಿತ್ಸೆಯ ಪಯಣವನ್ನು ಸ್ಪರ್ಧಾಳು ತಾನು ಧ-ರಿಸಿದ ಗೌನ್ ನಲ್ಲಿ ಎಲ್ಲರಿಗೂ ಕಾಣುವಂತೆ ಮಾಡಿದ್ದಾಳೆ. ಪ್ರತಿ ಪದರದಲ್ಲೂ ಶಸ್ತ್ರ ಚಿಕಿತ್ಸೆಯ ನೋವು, ಸಂಕಟ, ತೀವ್ರ ಭಯದ ಹಿಂದೆ ತನ್ನ ಮಗುವನ್ನು ಈ ಭೂಮಿಗೆ ತರುವ ನಿಟ್ಟಿನಲ್ಲಿ ತಾಯಿಯ ಪ್ರಯತ್ನ ಹಾಗೂ ಆಕೆಯ ಅದುಮಿಟ್ಟ ಪ್ರೀತಿಯನ್ನು ನಾವು ಕಾಣಬಹುದು .
ಸಂಪೂರ್ಣ ಮೇಲ್ಭಾಗದಲ್ಲಿ ಮುತ್ತು ಹಾಗೂ ಕ್ರಿಸ್ಟಲ್ ಗಳ ಅಲಂಕಾರವನ್ನು ಹೊಂದಿರುವ ಅತ್ಯಂತ ಮೆದುವಾದ ಪೀಚ್ ಬಣ್ಣದ ಪದರವಿದ್ದರೆ ಒಳಗಿನ ಪದರಗಳು ನಮ್ಮ ದೇಹದ ಒಳಭಾಗದಲ್ಲಿ ಆಳವಾಗಿ ಕತ್ತರಿಸುತ್ತಾ ಹೋದಾಗ ದೊರೆಯುವಂತೆ ತೀವ್ರ ಕೆಂಪು ಹಾಗೂ ಬಗ90ಡಿ ಬಣ್ಣಗಳಲ್ಲಿ ಅನಾವರಣಗೊಳ್ಳುತ್ತಾ ಸಾಗುತ್ತದೆ.
ಈ ವಿನ್ಯಾಸವನ್ನು ಸೃಷ್ಟಿಸಿದ ವಿನ್ಯಾಸಕಾರಳಾದ ಉಗಾಂಡಾದ ಖ್ಯಾತ ವಿನ್ಯಾಸಗಾರ್ತಿ ಕೀಶಾ ಅಬ್ದುಲ್ಲಾ ಅವರು ಆಗ ತಾನೇ ತಾವು ಈ ಅನುಭವಕ್ಕೆ ಈಡಾಗಿ ತಮ್ಮ ಅನುಭವವನ್ನು ಬಟ್ಟೆಯ ಮೂಲಕ ವಿನ್ಯಾಸಗೊಳಿಸಿದ್ದಾರೆ. ಹೆಣ್ತನವು ಹೆಣ್ಣಿನ ದೇಹದ ಮೂಲಕ ಹೊರ ಬರುತ್ತಾ ಜಾಗತಿಕ ಚಮತ್ಕಾರವನ್ನು ಉಂಟುಮಾಡುವ ಹಾಗೂ ಈ ಬೃಹತ್ ಬ್ರಹ್ಮಾಂಡದೊಂದಿಗೆ ನಂಟನ್ನು ಹೊಂದುವ ಅದ್ಭುತ ಕ್ರಿಯೆ ಆಗಿ ಆಕೆ ತನ್ನ ದೃಷ್ಟಿಯನ್ನು ಸೂಚಿಸಿದ್ದಾಳೆ ಈ ಕುರಿತು ಆಕೆ ಹೀಗೆ ಬರೆದಿದ್ದಾಳೆ.
ಅತ್ಯಂತ ಸರಳವಾಗಿ ಒಬ್ಬ ಹೆಣ್ಣುಮಗಳು ಆಕೆ ಜಗತ್ತಿನ ಯಾವ ಮೂಲೆಯಿಂದಲೇ ಬಂದಿರಲಿ ತನ್ನ ದೇಹದ ಒಂದೊಂದೇ ಪದರಗಳನ್ನು ಮತ್ತೊಬ್ಬರೊಂದಿಗೆ ಹಂಚಿಕೊಂಡು ಮುಂದೆ ಸಾಗುತ್ತಾಳೆ ಎಂದು
ಹೀಗೆ ಏಳು ಪದರದ ದಿರಿಸು ಕೇವಲ ಫ್ಯಾಶನ್ ನ ಸಂಕೇತವಾಗಿಲ್ಲ ಇದು ತಮ್ಮ ಮಗುವಿಗಾಗಿ ತಮ್ಮ ದೇಹದ ಮೇಲೆ ಶಸ್ತ್ರಚಿಕಿತ್ಸೆಯ ಚಿತ್ತಾರವನ್ನು ಮೂಡಿಸಿಕೊಳ್ಳುವ ಆ ಎಲ್ಲ ತಾಯಂದಿರ ತ್ಯಾಗ, ಬಲ, ಸಾಮಥ-ರ್ಯಹಾಗೂ ಪ್ರೀತಿಯ ಸಂಕೇತವಾಗಿದೆ. ಹೆಣ್ಣಿನ ಈ ಅನುಭವವನ್ನು ಕಿರಿದೆಂದು ಭಾವಿಸಬೇಡಿ. ಅದೊಂದು ಅಸಾಧಾರಣವಾದ ಕ್ರಿಯೆ ಎಂದು ಕೀಶಾ ಹೇಳುತ್ತಾರೆ. ತನ್ನ ಹೊಟ್ಟೆಯಲ್ಲಿರುವ ಮಗುವನ್ನು ಭೇಟಿಯಾಗಲು ತಾಯಿ ಏಳು ಪದರದ ತನ್ನದೇ ಹೊಟ್ಟೆಯ ಚರ್ಮವನ್ನು ಕೊಯಿಸಿಕೊಂಡು ಭೇಟಿಯಾಗುವ ಅದ್ಭುತ ಸಾಧ್ಯತೆ.
ದ ಲೇಯರ್ಸ್ ಆಫ್ ಲೈಫ್ ಗೌನ್ ತಾಯಿ ತನ್ನ ಮಗುವಿನೊಂದಿಗೆ ಹಂಚಿಕೊಳ್ಳುವ ಪ್ರೀತಿ ಮತ್ತು ಮಮತೆಯ ವಿಶೇಷ ಬಾಂಧವ್ಯವನ್ನು ಸಂಭ್ರಮಿಸುತ್ತಿದೆ. ಇದೀಗ ಆ ಗೌನ್ ಕಲೆಯು ತನ್ನ ಸೌಂದರ್ಯಕ್ಕಿಂತ ಹೆಚ್ಚಿನ ಅರ್ಥವನ್ನು ಹೊಂದಿದೆ ಎಂಬುದನ್ನು ನಮಗೆ ನೆನಪಿಸುತ್ತದೆ.... ಏನಂತೀರಾ ಸ್ನೇಹಿತರೇ?



ವೀಣಾ ಹೇಮಂತ್ ಗೌಡ
ಪಾಟೀಲ, ಮುಂಡರಗಿ ಗದಗ.

# ನಾನು ನನ್ನದು ಎಂದು ಮೆರೆಯಬೇಡ

ಜೀವನದಲ್ಲಿ ಮನುಷ್ಯ ಎಷ್ಟೇ ಎತ್ತರಕ್ಕೆ ಬೆಳೆದರೂ, ತನ್ನ ಬೇರುಗಳನ್ನು ಮರೆಯಬಾರದು. ಹಣ, ಅಧಿಕಾರ, ಸ್ಥಾನಮಾನ, ಜನಪ್ರಿಯತೆ ಮತ್ತು ಯಶಸ್ಸು ಬಂದಾಗ "ಇದು ನನ್ನದು, ನಾನು ಮಾಡಿದ್ದು" ಎಂಬ ಹೆಮ್ಮೆ ಸಹಜ. ಆದ-ರೆ ಆ ಹೆಮ್ಮೆ ಅಹಂಕಾರವಾಗಿ ಬದಲಾಗುವ ಕ್ಷಣದಿಂದಲೇ ಮನುಷ್ಯನ ನಿಜವಾದ ಪತನ ಆರಂಭವಾಗುತ್ತದೆ.

"ನಾನು ನನ್ನದು ಎಂದು ಮೆರೆಯಬೇಡ" ಎಂಬ ಮಾತು ನಮ್ಮ ಬದುಕಿಗೆ ಬಹಳ ದೊಡ್ಡ ಸಂದೇಶವನ್ನು ನೀಡುತ್ತದೆ. ಈ ಜಗತ್ತಿನಲ್ಲಿ ನಾವು ಯಾವುದನ್ನೂ ಶಾಶ್ವತವಾಗಿ ನಮ್ಮದಾಗಿಸಿಕೊಂಡು ಹೋಗಲು ಸಾಧ್ಯವಿಲ್ಲ. ಇಂದು ನಮ್ಮ ಕೈಯಲ್ಲಿರುವ ಅಧಿಕಾರ ನಾಳೆ ಮತ್ತೊಬ್ಬರ ಕೈಗೆ ಹೋಗಬಹುದು. ಇಂದು ಇರುವ ಹಣ ನಾಳೆ ಇರದಿರಬಹುದು. ಇಂದು ನಮ್ಮ ಸುತ್ತಲಿರುವ ಜನರು ನಾಳೆ ನಮ್ಮೊಂದಿಗೆ ಇರದೇ ಇರಬಹುದು. ಹಾಗಾದರೆ ಮೆರೆಯುವುದೇಕೆ?

ನಮ್ಮ ಯಶಸ್ಸಿನ ಹಿಂದೆ ನಮ್ಮ ಶ್ರಮದ ಜೊತೆಗೆ ಅನೇಕ ಜನರ ಸಹಕಾರವೂ ಇರುತ್ತದೆ. ತಂದೆ-ತಾಯಿಯ ತ್ಯಾಗ, ಕುಟುಂಬದ ಬೆಂಬಲ, ಸ್ನೇಹಿತರ ಪ್ರೋತ್ಸಾಹ, ಗುರುಗಳ ಮಾರ್ಗದರ್ಶನ ಹಾಗೂ ಸಮಾಜ ನೀಡಿದ ಅವಕಾಶ?ಇವೆಲ್ಲವೂ ನಮ್ಮ ಸಾಧನೆಯ ಭಾಗವೇ ಆಗಿವೆ. ಆದ್ದರಿಂದ ಯಶಸ್ಸು ಸಿಕ್ಕಾಗ "ನಾನು" ಎನ್ನುವುದಕ್ಕಿಂತ "ನಮ್ಮಿಂದ ಸಾಧ್ಯವಾಯಿತು" ಎನ್ನುವ ಮನೋಭಾವ ಬೆಳೆಸಿಕೊಳ್ಳಬೇಕು.

ಮರ ಎಷ್ಟೇ ಎತ್ತರಕ್ಕೆ ಬೆಳೆದರೂ ಅದರ ಬೇರುಗಳು ನೆಲದಲ್ಲೇ ಇರುತ್ತವೆ. ಅದೇ ರೀತಿ ಮನುಷ್ಯ ಎಷ್ಟೇ ದೊಡ್ಡವನಾದರೂ ತನ್ನ ಮೂಲವನ್ನು, ತನ್ನನ್ನು ಬೆಳೆಸಿದವರನ್ನು ಮತ್ತು ತನ್ನ ಹಿಂದಿನ ದಿನಗಳನ್ನು ಮರೆಯಬಾರದು.

ಅಹಂಕಾರದಿಂದ ಮಾತನಾಡುವ ವ್ಯಕ್ತಿಯನ್ನು ಜನ





ಕೆಲಕಾಲ ಗೌರವಿಸಬಹುದು; ಆದರೆ ವಿನಯದಿಂದ ನಡೆದುಕೊಳ್ಳುವ ವ್ಯಕ್ತಿಯನ್ನು ಜನ ಜೀವನಪೂರ್ತಿ ನೆನಪಿಸಿಕೊಳ್ಳುತ್ತಾರೆ. ಅಧಿಕಾರವಿರುವಾಗ ಎಲ್ಲರನ್ನೂ ಗೌರವಿಸುವುದು ನಿಜವಾದ ದೊಡ್ಡತನ. ದುರ್ಬಲರನ್ನು ತುಳಿದು ಮೇಲೆ ಏರುವುದು ಸಾಧನೆಯಲ್ಲ; ನಮ್ಮೊಂದಿಗೆ ಇರುವವರನ್ನೂ ಮೇಲಕ್ಕೆತ್ತುವುದು ನಿಜವಾದ ಸಾಧನೆ.

ಜೀವನ ಒಂದು ಚಕ್ರದಂತೆ. ಇಂದು ಮೇಲಿರುವವನು ನಾಳೆ ಕೆಳಗೆ ಬರಬಹುದು; ಇಂದು ಸಂಕಷ್ಟದಲ್ಲಿರುವವನು ನಾಳೆ ಯಶಸ್ಸಿನ ಶಿಖರ ತಲುಪಬಹುದು. ಆದ್ದರಿಂದ ಯಾರನ್ನೂ ಕಡಿಮೆ ಎಂದು ಕಾಣಬಾರದು. ಯಾರನ್ನೂ ಅವಮಾನಿಸಬಾರದು.

ನಮ್ಮ ಬಳಿ ಇರುವುದೆಲ್ಲವೂ ಶಾಶ್ವತವಲ್ಲ; ಆದರೆ ನಾವು ಇತರರ ಹೃದಯದಲ್ಲಿ ಬಿಟ್ಟುಹೋಗುವ ಒಳ್ಳೆಯ ನೆನಪುಗಳು ಮಾತ್ರ ಶಾಶ್ವತವಾಗಿರಬಹುದು.

ಹೀಗಾಗಿ ಹಣವಿದ್ದರೆ ಸಹಾಯ ಮಾಡೋಣ, ಅಧಿಕಾರವಿದ್ದರೆ ನ್ಯಾಯ ಮಾಡೋಣ, ಜ್ಞಾನವಿದ್ದರೆ ಹಂಚಿಕೊಳ್ಳೋಣ, ಯಶಸ್ಸು ಸಿಕ್ಕರೆ ಇತರರನ್ನೂ ಪ್ರೋತ್ಸಾಹಿಸೋಣ.

"ನಾನು" ಎಂಬ ಅಹಂಕಾರವನ್ನು ಬಿಟ್ಟು "ನಾವು" ಎಂಬ ಭಾವನೆ ಬೆಳೆಸಿಕೊಂಡಾಗ ಮಾತ್ರ ಸಮಾಜದಲ್ಲಿ ನಿಜವಾದ ಬದಲಾವಣೆ ಸಾಧ್ಯ.

ಕೊನೆಗೆ ಒಂದು ಸತ್ಯವನ್ನು ಸದಾ ನೆನಪಿನಲ್ಲಿಟ್ಟುಕೊಳ್ಳೋಣ?

ಇಲ್ಲಿ ಯಾವುದೂ ಶಾಶ್ವತವಾಗಿ ನಮ್ಮದಲ್ಲ. ನಾವು ಖಾಲಿ ಕೈಯಲ್ಲಿ ಬಂದಿದ್ದೇವೆ, ಖಾಲಿ ಕೈಯಲ್ಲೇ ಹೋಗುತ್ತೇವೆ.
ಆದರೆ ಹೋಗುವ ಮುನ್ನ ನಾವು ಮಾಡಿದ ಒಳ್ಳೆಯ ಕೆಲಸಗಳು, ತೋರಿದ ಮಾನವೀಯತೆ ಮತ್ತು ಗೆದ್ದ ಹೃದಯಗಳು ಮಾತ್ರ ನಮ್ಮ ನಿಜವಾದ ಸಂಪತ್ತು.
ಆದ್ದರಿಂದ?

"ನಾನು ನನ್ನದು ಎಂದು ಮೆರೆಯಬೇಡ; ನಾಳೆ ಎಲ್ಲವೂ ಮತ್ತೊಬ್ಬರದು ಎಂಬ ಸತ್ಯವನ್ನು ಮರೆಯಬೇಡ."

# ಕಾರ್ಯದರ್ಶಿ ಇಲ್ಲದೇ ನಡೆದ ಪ್ರಾ.ಕೃ.ಪ.ಸಂಘದ ವಾರ್ಷಿಕ ಮಹಾಸಭೆ

## ಷೇರುದಾರರ ಪ್ರಶ್ನೆಗಳಿಗೆ ಉತ್ತರಿಸುವವರು ಯಾರು ತಾತ್ಕಾಲಿಕ ಕಾರ್ಯದರ್ಶಿ ನೇಮಕ ಮಾಡದೇ ಸಭೆ ನಡೆಸಿದ ಆರೋಪ

**ಅ.ಶ. ಸುದ್ದಿ ಮಂಗಳೂರು**

**ಮಂಗಳೂರು: ತಾಲೂಕಿನ ಮಂಗಳೂರು ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ವಾರ್ಷಿಕ ಮಹಾಸಭೆ ಹಾಗೂ ಸಂಘದ 50ನೇ ವರ್ಷದ ಅಮೃತ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ಸಭೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅನುಪಸ್ಥಿತಿಯಲ್ಲಿ ತರಾತುರಿಯಲ್ಲಿ ನಡೆಸಲಾಗಿದೆ ಎಂದು ಷೇರುದಾರರು ಹಾಗೂ ಗ್ರಾಮಸ್ಥರು ಆರೋಪಿಸಿದ್ದಾರೆ.**

ಸಂಘದ ಕಾರ್ಯನಿರ್ವಾಹಕ ಅಧಿಕಾರಿ ಹನಮಗೌಡ ಇಳಿಗೇರ್ ಅವರು ಅನಾರೋಗ್ಯದ ಹಿನ್ನೆಲೆಯಲ್ಲಿ ಸುಮಾರು ಮೂರು ತಿಂಗಳಿನಿಂದ ಕರ್ತವ್ಯಕ್ಕೆ ಗೈರಾಗಿದ್ದಾರೆ ಎನ್ನಲಾಗಿದೆ. ಸೆ.25ರಂದು ವಾರ್ಷಿಕ ಮಹಾಸಭೆ ನಡೆಸಲು ಪೂರ್ವಭಾವಿ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಸೆ.23ರಂದು ಕಾರ್ಯನಿರ್ವಾಹಕ ಅಧಿಕಾರಿ ವೈದ್ಯಾಧಿಕಾರಿಗಳ ಸಲಹೆಯಂತೆ ಚಿಕಿತ್ಸೆ ಅಗತ್ಯವಿರುವುದರಿಂದ ವೈದ್ಯಕೀಯ ರಜೆ ಮಂಜೂರು ಮಾಡುವಂತೆ ಸಂಘದ ಅಧ್ಯಕ್ಷರು ಹಾಗೂ ಸಿಬ್ಬಂದಿಗೆ ಅರ್ಜಿ ಸಲ್ಲಿಸಿದ್ದರು ಎನ್ನಲಾಗಿದೆ.




ಆದರೆ, ಕಾರ್ಯದರ್ಶಿ ಅನಾರೋಗ್ಯದಿಂದ ಗೈರಾಗಿರುವ ಸಂದರ್ಭದಲ್ಲಿ ತಾತ್ಕಾಲಿಕ ಕಾರ್ಯದರ್ಶಿಯನ್ನು ನೇಮಕ ಮಾಡದೇ ವಾರ್ಷಿಕ ಮಹಾಸಭೆ ನಡೆಸಲಾಗಿದೆ. ಇದು ಸಂಘದ ಬೈಲಾ ಹಾಗೂ ಸಹಕಾರ ಇಲಾಖೆಯ ನಿಯಮಗಳಿಗೆ ವಿರುದ್ಧವಾಗಿದೆಯೇ ಎಂಬ ಪ್ರಶ್ನೆಯನ್ನು ಷೇರುದಾರರು ಎತ್ತಿದ್ದಾರೆ.

ಷೇರುದಾರರ ಪ್ರಶ್ನೆಗಳಿಗೆ ಅಸಮರ್ಪಕ ಉತ್ತರ? ವಾರ್ಷಿಕ ಮಹಾಸಭೆಯಲ್ಲಿ ಸಂಘದ ಒಂದು ವರ್ಷದ ವ್ಯವಹಾರ, ಸಾಲ ವಿತರಣೆ, ಠೇವಣಿ ನಿರ್ವಹಣೆ, ಸಂಘದ ಠೇವಣಿ ಹಣ, ಸರ್ಕಾರದ ಸಬ್ಸಿಡಿ ಹಾಗೂ ಅನುದಾನ, ಗೊಬ್ಬರ ಪೂರೈಕೆ, ಸಾಲ ಮರುಪಾವತಿ ಮತ್ತು ಬಾಕಿ ಸಾಲ ಸೇರಿದಂತೆ ವಿವಿಧ ವಿಷಯಗಳ ಕುರಿತು



ಷೇರುದಾರರಿಗೆ ಮಾಹಿತಿ ನೀಡಬೇಕಾಗುತ್ತದೆ. ಆದರೆ ಕಾರ್ಯದರ್ಶಿಯ ಅನುಪಸ್ಥಿತಿಯಲ್ಲಿ ಸಂಘದ ಅಧ್ಯಕ್ಷರು ವಾರ್ಷಿಕ ವರದಿ ಮಂಡಿಸಿದ್ದು, ಷೇರುದಾರರು ಕೇಳಿದ ಕೆಲವು ಪ್ರಶ್ನೆಗಳಿಗೆ ಸಮರ್ಪಕ ಮಾಹಿತಿ ದೊರೆಯಲಿಲ್ಲ ಎಂದು ಕೆಲ ಷೇರುದಾರರು ಆರೋಪಿಸಿದ್ದಾರೆ.

ತಾತ್ಕಾಲಿಕ ಕಾರ್ಯದರ್ಶಿ ನೇಮಕವಾಗಿತ್ತೇ? ಕಾರ್ಯದರ್ಶಿ ವೈದ್ಯಕೀಯ ರಜೆಯಲ್ಲಿದ್ದ ಸಂದರ್ಭದಲ್ಲಿ ಆಡಳಿತ ಮಂಡಳಿ ತಾತ್ಕಾಲಿಕ ಕಾರ್ಯದರ್ಶಿಯನ್ನು ನೇಮಕ ಮಾಡಲು ನಿರ್ಣಯ ಕೈಗೊಂಡಿತ್ತೇ? ಅಥವಾ ಅಧ್ಯಕ್ಷರಿಗೆ ವಾರ್ಷಿಕ ವರದಿ ಮಂಡಿಸುವ ಅಧಿಕಾರ ನೀಡಲಾಗಿತ್ತೇ? ಎಂಬುದನ್ನು ಸಂಘದ ಬೈಲಾ ಹಾಗೂ ಸಂಬಂಧಿತ ಸಹಕಾರಿ ನಿಯಮಗಳ ಆಧಾರದಲ್ಲಿ ಪರಿಶೀಲಿಸಬೇಕಾಗಿದೆ ಎಂದು ಷೇರುದಾರರು ತಿಳಿಸಿದ್ದಾರೆ. ಕಾರ್ಯದರ್ಶಿಯ ದೀರ್ಘಕಾಲದ ಗೈರುಹಾಜರಿಯಲ್ಲಿ ಆಡಳಿತ ಮಂಡಳಿಯು ಸೂಕ್ತ ನಿರ್ಣಯ ಕೈಗೊಂಡು ತಾತ್ಕಾಲಿಕ ಜವಾಬ್ದಾರಿ ನೀಡಬೇಕಾಗಿತ್ತು ಎಂಬುದು ಷೇರುದಾರರ ವಾದವಾಗಿದೆ.

ಆದರೆ ಈ ಕುರಿತು ಪೂರ್ವಭಾವಿ ಸಭೆಯಲ್ಲಿ ತಾತ್ಕಾಲಿಕ ಕಾರ್ಯದರ್ಶಿ ನೇಮಕದ ಬಗ್ಗೆ ಪ್ರಸ್ತಾವನೆಯೇ ಇರಲಿಲ್ಲ ಹಾಗೂ ಮೇಲಾಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆಯೇ ಎಂಬ ಬಗ್ಗೆಯೂ ಪ್ರಶ್ನೆಗಳು ಉದ್ಭವಿಸಿವೆ. ಮೇಲಾಧಿಕಾರಿಗಳಿಗೆ ದೂರು ನೀಡಲು ನಿರ್ಧಾರ ಕಾರ್ಯದರ್ಶಿಯ ಅನುಪಸ್ಥಿತಿಯಲ್ಲಿ ಮಹಾಸಭೆ ನಡೆಸಿರುವ ಕ್ರಮ, ವಾರ್ಷಿಕ ವರದಿ ಮಂಡನೆ ಹಾಗೂ ಷೇರುದಾರರ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳ ಕುರಿತು ಸಹಕಾರಿ ಇಲಾಖೆಯ ಮೇಲಾಧಿಕಾರಿಗಳಿಗೆ ದೂರು ಸಲ್ಲಿಸಿ, ನಿಯಮಾನುಸಾರ ಪರಿಶೀಲನೆ ನಡೆಸುವಂತೆ ಮನವಿ ಮಾಡಲಾಗುವುದು ಎಂದು ಷೇರುದಾರರು ತಿಳಿಸಿದ್ದಾರೆ. ಸಭೆಯಲ್ಲಿ ಸಂಘದ ಅಧ್ಯಕ್ಷರು, ನಿರ್ದೇಶಕರು, ಷೇರುದಾರರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

## ರೈತರಿಗೆ ತಕ್ಷಣ ವಿಶೇಷ ಆರ್ಥಿಕ ನೆರವು ನೀಡುವಂತೆ ಟಿ.ಎ.ಶರವಣ ಒತ್ತಾಯ

**ಅ.ಶ. ಸುದ್ದಿ ಬೆಂಗಳುರು**

**ಬೆಂಗಳೂರು: ರಾಜ್ಯದಲ್ಲಿ ಬರಗಾಲದ ಪರಿಸ್ಥಿತಿ ತೀವ್ರಗೊಂಡಿರುವ ಹಿನ್ನೆಲೆಯಲ್ಲಿ ಸಂಕಷ್ಟದಲ್ಲಿರುವ ರೈತ ಕುಟುಂಬಗಳಿಗೆ ರಾಜ್ಯ ಸರ್ಕಾರ ತಕ್ಷಣ ವಿಶೇಷ ಆರ್ಥಿಕ ನೆರವು ನೀಡಬೇಕು ಎಂದು ವಿಧಾನ ಪರಿಷತ್‌ನ ಜೆಡಿಎಸ್ ಶಾಸಕಾಂಗ ಪಕ್ಷದ ಉಪನಾಯಕ ಟಿ.ಎ.ಶರವಣ ಅವರು ಒತ್ತಾಯಿಸಿದರು.**



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬರಗಾಲದ ಹಿನ್ನೆಲೆಯಲ್ಲಿ ರೈತರಿಗೆ ಸರ್ಕಾರ ನೀಡುತ್ತಿರುವ 2,500 ರೂ. ನೆರವು ಯಾವುದಕ್ಕೂ ಸಾಲುವುದಿಲ್ಲ. ಇದರಲ್ಲಿ ಕೆಟ್ಟು ನಿಂತಿರುವ ಬೋರ್‌ವೆಲ್‌ಗಳನ್ನು ದುರಸ್ತಿ ಮಾಡಿಸುವುದಕ್ಕೂ ಸಾಧ್ಯವಾಗುವುದಿಲ್ಲ ಎಂದು ಹೇಳಿದರು. ಬೋರ್‌ವೆಲ್ ದುರಸ್ತಿಗೆ ಮೋಟಾರ್, ಪೈಪ್‌ಗಳು, ಕೇಬಲ್‌ಗಳು ಸೇರಿದಂತೆ ವಿವಿಧ ಉಪಕರಣಗಳ ವೆಚ್ಚವೂ ಹೆಚ್ಚಾಗಿರುವುದರಿಂದ ಸಣ್ಣ ಮತ್ತು ಮಧ್ಯಮ ರೈತರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಅವರು ತಿಳಿಸಿದರು. ಈ ಹಿನ್ನೆಲೆಯಲ್ಲಿ ಬರಗಾಲದಿಂದ ಸಂಕಷ್ಟಕ್ಕೊಳಗಾಗಿರುವ ಪ್ರತಿ ರೈತ ಕುಟುಂಬಕ್ಕೆ ಕನಿಷ್ಠ 25,000 ರೂ. ವಿಶೇಷ ನೆರವನ್ನು ರಾಜ್ಯ ಸರ್ಕಾರ ನೀಡಬೇಕು. ಈ ನೆರವನ್ನು ಕೇವಲ ಪರಿಹಾರಧನವಾಗಿ ಪರಿಗಣಿಸದೆ, ರೈತರ ನೀರಿನ ಮೂಲಗಳನ್ನು ಪುನಶ್ಚೇತನಗೊಳಿಸಿ ಕೃಷಿ ಚಟುವಟಿಕೆಗಳನ್ನು ಮುಂದುವರಿಸಲು ನೆರವಾಗುವ ರೀತಿಯಲ್ಲಿ ಒದಗಿಸಬೇಕು ಎಂದು ಅವರು ಆಗ್ರಹಿಸಿದರು. ರೈತರು ಕೃಷಿಯನ್ನೇ ಜೀವನಾಧಾರವಾಗಿಸಿಕೊಂಡಿದ್ದು, ನೀರಿನ ಕೊರತೆ ಹಾಗೂ ಬೆಳೆ ನಷ್ಟದಿಂದ ಅವರ ಕುಟುಂಬಗಳ ಆರ್ಥಿಕ ಪರಿಸ್ಥಿತಿ ಮತ್ತಷ್ಟು ದುರ್ಬಲವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಸರ್ಕಾರವು ರೈತರ ಸಮಸ್ಯೆಗಳಿಗೆ ಸ್ಪಂದಿಸಿ, ಅಗತ್ಯವಿರುವಷ್ಟು ಆರ್ಥಿಕ ನೆರವನ್ನು ತುರ್ತಾಗಿ ಬಿಡುಗಡೆ ಮಾಡಬೇಕಾಗಿದೆ ಎಂದು ಶರವಣ ಅವರು ಹೇಳಿದರು. ಬರಗಾಲದ ಪರಿಣಾಮವನ್ನು ಎದುರಿಸುತ್ತಿರುವ ರೈತರ ಹಿತದೃಷ್ಟಿಯಿಂದ ಸರ್ಕಾರವು ತಕ್ಷಣವೇ ವಿಶೇಷ ಪ್ಯಾಕೇಜ್ ಘೋಷಿಸಿ, ನೀರಿನ ಮೂಲಗಳ ಪುನಶ್ಚೇತನ ಹಾಗೂ ಕೃಷಿ ಚಟುವಟಿಕೆಗಳಿಗೆ ಅಗತ್ಯ ಸಹಕಾರ ನೀಡಬೇಕು ಎಂದು ಅವರು ಆಗ್ರಹಿಸಿದರು.

# ರೈತ ಹೋರಾಟಕ್ಕೆ ನನ್ನ ಸಂಪೂರ್ಣ ಬೆಂಬಲ ದಯಾಸಾಗರ ಪಾಟೀಲ

**ಅ.ಶ. ಸುದ್ದಿ ಇಂಡಿ**

**ಇಂಡಿ: ತಾಲ್ಲೂಕಿನ ತಡವಲಗಾ ಗ್ರಾಮದ ಜೋಡಗುಡಿ ಹತ್ತಿರ ಅಕ್ಕಲಕೋಟ-ವಿಜಯಪೂರ ರಾಷ್ಟ್ರೀಯ ಹೆದ್ದಾರಿ ಬಳಿ ಜೋಡಗುಡಿ ಹತ್ತಿರ ರೈತರು ಧರಣಿ ಸತ್ಯಾಗ್ರಹ ನಾಲ್ಕನೇ ದಿನಕ್ಕೆ ಕಾಲಿಟ್ಟಿದ್ದೆ. ಈ ಹೋರಾಟಕ್ಕೆ ನನ್ನ ಸಂಪೂರ್ಣ ಬೆಂಬಲ ಎಂದು ಬಿಜೆಪಿ ಮುಖಂಡರಾದ ದಯಾಸಾಗರ ಪಾಟೀಲ ಹೇಳಿದರು.ಈ ಸಂದರ್ಭದಲ್ಲಿ ಮಾತನಾಡಿದ ಅವರು ಇಂಡಿ ತಾಲ್ಲೂಕಿನ ಎಲ್ಲಾ ಕೆರೆಗಳನ್ನು ತುಂಬಿಸಬೇಕು ಹಾಗೂ ರೈತರಿಗೆ ಸಮರ್ಪಕವಾಗಿ ವಿದ್ಯುತ್ ಸರಬರಾಜು ಮಾಡಬೇಕು ಹಾಗೂ ಬೀಕರ ಬರಗಾಲದಿಂದ ಕಂಗಾಲಾಗಿದ್ದ ಹಾಗೂ ಬೆಳೆ ಕಳೆದುಕೊಂಡ ರೈತರಿಗೆ ಸೂಕ್ತ ಪರಿಹಾರ ನೀಡಬೇಕು.**

ಪ್ರಧಾನ ಮಂತ್ರಿ ಭೀಮಾ ಫಸಲು ಯೋಜನೆ ಅಡಿಯಲ್ಲಿ ಬೆಳೆ ವಿಮೆ ವಿಮೆ ಕಟ್ಟಿದ ರೈತರಿಗೆ ಮಧ್ಯೆ ಯಂತ್ರ ಬೆಳೆ ವಿಮೆ ನೀಡಬೇಕು ಸೇರಿದಂತೆ ಅನೇಕ ಬೇಡಿಕೆ ಈಡೇರಿಕೆಗೆ



ಆಗ್ರಹಿಸಿ ಧರಣಿ ಸತ್ಯಾಗ್ರಹ ಮುಂದುವರದಿದ್ದೆ. ಈ ಸಂದರ್ಭದಲ್ಲಿ ಮಾತನಾಡಿದ ಭಾರತೀಯ ಕಿಸಾನ್ ಸಂಘದ ರಾಜ್ಯ ಕಾರ್ಯಕಾರಣಿ ಸದಸ್ಯರಾದ ಗುರುನಾಥ ಬಗಲಿ ಹಾಗೂ ವಿಜಯಪೂರ ಜಿಲ್ಲಾ ಕಿಸಾನ್ ಸಂಘದ ಅಧ್ಯಕ್ಷರಾದ ಮಲ್ಲನಗೌಡ ಪಾಟೀಲ ಜಂಟಿಯಾಗಿ ಮಾತನಾಡಿ ನಮ್ಮ ಹೋರಾಟ ಮುಂದುವರಿಯಲಿದೆ ಎಂದು ಹೇಳಿದರು.

ಇಂದಿನ ರೈತರ ಧರಣಿ ಸತ್ಯಾಗ್ರಹಕ್ಕೆ ತಡವಲಗಾ ಗ್ರಾಮದ ಹಿರೇಮಠದ ಶ್ರೀ ಅಭಿನವ ರಾಚೋಟೇಶ್ವರ ಶಿವಾಚಾರ್ಯ,ಗುಡ್ಡಾಪೂರದ ಪೂಜ್ಯರು, ರೇವಣಸಿದ್ದಯ್ಯ ಹಿರೇಮಠ ಹಾಗೂ ಜೆಡಿಎಸ್ ಇಂಡಿ ತಾಲೂಕು ಘಟಕ ಅಧ್ಯಕ್ಷರಾದ ಬಿ ಡಿ ಪಾಟೀಲ ಸಂತೋಷ್ ಇಂಡಿ ರವಿ ಮಸಳಿ ಸೇರಿದಂತೆ ಅನೇಕರು ಮಾತನಾಡಿದರು. ಇಂದಿನ ಈ ಹೋರಾಟದಲ್ಲಿ ಇಂಡಿ ತಾಲೂಕು ಕಿಸಾನ್ ಸಂಘದ ಅಧ್ಯಕ್ಷರಾದ ಈರಪ್ಪ ಗೋಟ್ಯಾಳ ದಸಗೀರಸಾಬ ಬಾಗವಾನ ಅಂಬಣ್ಣ ಖಸ್ಕಿ ಚನ್ನಪ್ಪ ಮಿರಗಿ ಶಿವಲಿಂಗಪ್ಪ ಕಟ್ಟಿ ಶಾಂತಪ್ಪ ಖಸ್ಕಿ ಬಾಬು ಡೊಂಬರ ಪ್ರಕಾಶ ಇಂಡಿ ಶರಣಪ್ಪ ತಾರಾಪೂರ ಅಂಬಣ್ಣ ಪಂತೋಜಿ ಶೇಂಕ್ರೇಪ್ಪ ರೂಗಿ ಭೀಮರಾಯ ಬುಕ್ಕಾಣಿ ಧರೇಪ್ಪ ಮೇತ್ರಿ ಗಂಗಪ್ಪ ಅಹಿರಸಂಗ ಚಿದಾನಂದ ಮದರಿ ಶಾಂತಪ್ಪ ರೂಗಿ ಶರಣು ಪಂತೋಜಿ ಚಂದ್ರಾಮ ಖಸ್ಕಿ ಶಿವಕಾಂತ ಖಸ್ಕಿ ಭೀಮಣ್ಣ ಕಪಾಲಿ ಸಿದ್ದಗೊಂಡ ತೆನ್ನಹಳ್ಳಿ ಚಂದ್ರಕಾಂತ ಮೇತ್ರಿ ಮಾದೇಪ್ಪ ಗೊಳ್ಳಗಿ ಗುರಪ್ಪ ಮೇತ್ರಿ ಮಳಸಿದ್ದಪ್ಪ ತಳವಾರ ಸೇರಿದಂತೆ ಅನೇಕ ರೈತರು ಉಪಸ್ಥಿತರಿದ್ದರು.

# ಶಿಥಿಲಾವಸ್ಥೆಯ ಶಾಲಾ ಕಟ್ಟಡ; ಮೂಲಸೌಕರ್ಯಗಳಿಗೂ ಕೊರತೆ

## ಸುದ್ದಿಯ ಬೆನ್ನಲ್ಲೇ ಶಾಲೆಗೆ ದೌಡಾಯಿಸಿದ ಬಿಇಒ ಶ್ರೀನಿವಾಸ್



**ಅ.ಶ. ಸುದ್ದಿ ಕುಕನೂರು**

**ಕುಕನೂರು: ಶಾಲಾ ಕಟ್ಟಡದ ಶಿಥಿಲಾವಸ್ಥೆ ಹಾಗೂ ಮೂಲಸೌಕರ್ಯಗಳ ಕೊರತೆ ಕುರಿತು ಮಾಧ್ಯಮಗಳಲ್ಲಿ ವರದಿ ಪ್ರಕಟವಾದ ಬೆನ್ನಲ್ಲೇ ಯಲಬುರ್ಗಾ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀನಿವಾಸ್ ಅವರು ಶಾಲೆಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದರು.**

ಶಾಲೆಯ ಕಟ್ಟಡದ ಸ್ಥಿತಿ, ತರಗತಿ ಕೊಠಡಿಗಳು, ಕುಡಿಯುವ ನೀರು, ಶೌಚಾಲಯ ಸೇರಿದಂತೆ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಮೂಲಸೌಕರ್ಯಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದು



ಪರಿಶೀಲಿಸಿದರು. ಶಾಲೆಯಲ್ಲಿ ಓದುತ್ತಿರುವ ಮಕ್ಕಳ ಸುರಕ್ಷತೆ ಹಾಗೂ ಶೈಕ್ಷಣಿಕ ವಾತಾವರಣಕ್ಕೆ ಯಾವುದೇ ರೀತಿಯ ತೊಂದರೆಯಾಗದಂತೆ ಅಗತ್ಯ ಕ್ರಮ ಕೈಗೊಳ್ಳುವ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿದರು. ಶಿಥಿಲಾವಸ್ಥೆಯಲ್ಲಿರುವ ಕಟ್ಟಡದಿಂದ ವಿದ್ಯಾರ್ಥಿಗಳಿಗೆ ಎದುರಾಗಬಹುದಾದ ಸಮಸ್ಯೆಗಳ ಬಗ್ಗೆ ಪರಿಶೀಲಿಸಿದ ಬಿಇಒ ಶ್ರೀನಿವಾಸ್, ಮಕ್ಕಳ ಸುರಕ್ಷತೆಗೆ ಮೊದಲ ಆದ್ಯತೆ ನೀಡಬೇಕು ಎಂದು ಸಂಬಂಧಿಸಿದವರಿಗೆ ಸೂಚಿಸಿದರು.

ಶಾಲೆಯ ಮೂಲಸೌಕರ್ಯಗಳ ಕೊರತೆಯನ್ನು ಹಂತ ಹಂತವಾಗಿ ಪರಿಹರಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಮಾಧ್ಯಮದೊಂದಿಗೆ ಮಾತನಾಡಿದ ಬಿಇಒ ನಂತರ ಮಾಧ್ಯಮದೊಂದಿಗೆ ಮಾತನಾಡಿದ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀನಿವಾಸ್ ಅವರು, ಶಾಲೆಯಲ್ಲಿನ ಸಮಸ್ಯೆಗಳನ್ನು ಪರಿಶೀಲಿಸಲಾಗಿದ್ದು, ಮಕ್ಕಳ ಸುರಕ್ಷತೆ ಮತ್ತು ಶಿಕ್ಷಣಕ್ಕೆ ಯಾವುದೇ ತೊಂದರೆಯಾಗದಂತೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಸುದ್ದಿ ಪ್ರಕಟವಾದ ತಕ್ಷಣವೇ ಶಾಲೆಗೆ ಭೇಟಿ ನೀಡಿ ವಾಸ್ತವ ಸ್ಥಿತಿಯನ್ನು ಪರಿಶೀಲಿಸಿದ ಬಿಇಒ ಅವರ ಕ್ರಮಕ್ಕೆ ಪೋಷಕರು ಹಾಗೂ ಸ್ಥಳೀಯರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

# ತಮಿಳುನಾಡಿಗೆ ನೀರು ಬಿಡುವ ಆದೇಶ ಒಪ್ಪಲು ಸಾಧ್ಯವಿಲ್ಲ : ಸಚಿವ ಚಲುವರಾಯಸ್ವಾಮಿ

**ಅ.ಶ. ಸುದ್ದಿ ಬೆಂಗಳೂರು**

**ಬೆಂಗಳೂರು: ತಮಿಳುನಾಡಿಗೆ ಪ್ರತಿದಿನ 4 ಸಾವಿರ ಕ್ಯೂಸೆಕ್ ಕಾವೇರಿ ನೀರು ಹರಿಸುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿ ನೀಡಿರುವ ಆದೇಶವನ್ನು ಕರ್ನಾಟಕ ಒಪ್ಪಲು ಸಾಧ್ಯವಿಲ್ಲ ಎಂದು ಜಲ ಸಂಪನೂಲ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದ್ದಾರೆ.** ಸಿಡಬ್ಲ್ಯೂಆರ್‌ಸಿಯ ಆದೇಶವನ್ನು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಕೂಡ ಎತ್ತಿಹಿಡಿದಿರುವ ಹಿನ್ನೆಲೆಯಲ್ಲಿ, ರಾಜ್ಯದ ಜಲಾಶಯಗಳಲ್ಲಿನ ಪ್ರಸ್ತುತ ನೀರಿನ ಲಭ್ಯತೆ ಮತ್ತು ಮಳೆಯ ಕೊರತೆಯನ್ನು ಪರಿಗಣಿಸಬೇಕಾಗಿದೆ ಎಂದು ಸಚಿವರು ಒತ್ತಾಯಿಸಿದರು.

ಕೆಆರ್‌ಎಸ್, ಕಬಿನಿ, ಹೇಮಾವತಿ ಮತ್ತು ಹಾರಂಗಿ ಜಲಾಶಯಗಳಲ್ಲಿ ನೀರಿನ ಸಂಗ್ರಹ ತೀವ್ರವಾಗಿ ಕುಸಿದಿದ್ದು, ಒಳಹರಿವು ಕೂಡ ಕಡಿಮೆಯಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ವಾಸ್ತವ ಪರಿಸ್ಥಿತಿಯನ್ನು ಅಂಕಿ-ಅಂಶಗಳೊಂದಿಗೆ ಪ್ರಾಧಿಕಾರದ ಮುಂದೆ



ವಾದ ಮಂಡಿಸಿ, 4 ಸಾವಿರ ಕ್ಯೂಸೆಕ್ ಬದಲಿಗೆ 3 ಸಾವಿರ ಕ್ಯೂಸೆಕ್ ನೀರು ಹರಿಸುವಂತೆ ಮನವಿ ಮಾಡಲಾಗಿದೆ ಎಂದು ಅವರು ತಿಳಿಸಿದರು. ಕರ್ನಾಟಕದ ನಾಲ್ಕು ಪ್ರಮುಖ ಜಲಾಶಯಗಳಲ್ಲಿ ಒಟ್ಟು 49.775 ಟಿಎಂಸಿ (47.60%) ನೀರು ಮಾತ್ರ ಲಭ್ಯವಿದೆ. ಇದರಲ್ಲಿ ಕುಡಿಯುವ ನೀರಿಗೆ 29 ಟಿಎಂಸಿ, ಪರಿಸರ ಹರಿವಿಗೆ 10 ಟಿಎಂಸಿ ಹಾಗೂ ಮುಂಗಾರು ಬೆಳೆಗೆ 23.40 ಟಿಎಂಸಿ ಅಗತ್ಯವಿದೆ ಎಂದು ರಾಜ್ಯದ ಪ್ರತಿನಿಧಿಗಳು ಸಭೆಯಲ್ಲಿ ವಿವರಿಸಿದ್ದಾರೆ.

ಜೂ.1ರಿಂದ ಸೆ.22ರವರೆಗೆ ರಾಜ್ಯದಲ್ಲಿ 406.5 ಮಿ.ಮೀ. ಮಳೆಯಾಗಿದ್ದು, ಸಾಮಾನ್ಯ 643.4 ಮಿ.ಮೀ.ಗೆ ಹೋಲಿಸಿದರೆ ಶೇ.63.18ರಷ್ಟು ಮಳೆಯಾಗಿದೆ. ಜಲಾಶಯಗಳಿಗೆ ಒಳಹರಿವು ಕೇವಲ 2,200 ಕ್ಯೂಸೆಕ್‌ಗೆ ಇಳಿದಿದೆ. ಕಾವೇರಿ ಜಲಾನಯನ ಪ್ರದೇಶದ ಶೇ.71ರಷ್ಟು ತಾಲ್ಲೂಕುಗಳು ಬರಪೀಡಿತವಾಗಿದ್ದು, ಇದು ರಾಜ್ಯದ ಸಂಕಷ್ಟವನ್ನು ಮತ್ತಷ್ಟು ಹೆಚ್ಚಿಸಿದೆ ಎಂದು ಕರ್ನಾಟಕ ವಾದಿಸಿದೆ. ಇದೇ ವೇಳೆ, ಜು.29ರಿಂದ ಸೆ.23ರವರೆಗೆ ಬಿಳಿಗುಂಡ್ಲುವಿನಲ್ಲಿ ಸಿಡಬ್ಲ್ಯೂಎಂಎ ನಿಗದಿಪಡಿಸಿದ್ದ 4,21,500 ಕ್ಯೂಸೆಕ್ ಬದಲಿಗೆ 4,47,182 ಕ್ಯೂಸೆಕ್ (38.637 ಟಿಎಂಸಿ) ನೀರು ಹರಿಸಲಾಗಿದೆ. ಇದರಿಂದ ನಿಗದಿಗಿಂತ 25,682 ಕ್ಯೂಸೆಕ್ (2.219 ಟಿಎಂಸಿ) ಹೆಚ್ಚುವರಿ ನೀರು ಹರಿಸಲಾಗಿದೆ ಎಂಬುದು ಕರ್ನಾಟಕದ ಮತ್ತೊಂದು ವಾದವಾಗಿದೆ.

ಕಾವೇರಿ ಕೊಳ್ಳದ ಬೆಂಗಳೂರು ಸೇರಿದಂತೆ ಪಟ್ಟಣಗಳು ಮತ್ತು ಗ್ರಾಮಗಳ ಕುಡಿಯುವ ನೀರಿನ ಅಗತ್ಯಕ್ಕೆ ಮೊದಲ ಆದ್ಯತೆ ನೀಡಬೇಕಾಗಿದೆ. ಈಗ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಸಿದರೆ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದು ಎಂದು ಚಲುವರಾಯಸ್ವಾಮಿ ಹೇಳಿದರು. ಸೂಪರ್ ಎಲ್ ನಿನೊ ಪರಿಣಾಮ, ಮಳೆಯ ಕೊರತೆ ಹಾಗೂ ಮುಂದಿನ ದಿನಗಳಲ್ಲಿ ಒಳಹರಿವು ಹೆಚ್ಚಾಗುವ ಸಾಧ್ಯತೆ ಕಡಿಮೆ ಇರುವುದನ್ನು ಪರಿಗಣಿಸಿ ನೀರು ಹರಿಸುವ ಪ್ರಮಾಣವನ್ನು 3 ಸಾವಿರ ಕ್ಯೂಸೆಕ್‌ಗೆ ಇಳಿಸಬೇಕು ಎಂದು ಕರ್ನಾಟಕ ಒತ್ತಾಯಿಸಿದೆ. ಮುಂದಿನ ಕಾನೂನು ಹೋರಾಟದ ರೂಪುರೇಷೆಯನ್ನು ರಾಜ್ಯದ ಕಾನೂನು ತಜ್ಞರು ಮತ್ತು ಅಡ್ವೊಕೇಟ್ ಜನರಲ್ ಅವರೊಂದಿಗೆ ಚರ್ಚಿಸಿ ಸಿದ್ಧಪಡಿಸಲಾಗುವುದು ಎಂದು ಸಚಿವರು ತಿಳಿಸಿದರು.

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka